Digitized by Arya Samaj Foundation Chennai and eGangotri

ಆರ್ಯೋದ್ದೇಶ್ಯರತ್ನಮಾಲಾ

ಸ್ವಾಮೀ ದಯಾನಂದ ಸರಸ್ವತೀ

ಪ್ರಕಾಶಕರು

ಆರ್ಯ ಸಮಾಜ

ಸ್ವಾಮೀ ಶ್ರದ್ಧಾನಂದ ಭವನ

ವಿಶ್ವೇಶ್ವರಪುರಂ, ಬೆಂಗಳೂರು-560 004

(ದೂರವಾಣಿ : 626380)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯೋದ್ದೇಶ್ಯರತ್ನಮಾಲಾ

7756 DONATION

7757

ಸ್ವಾಮೀ ದಯಾನಂದ ಸರಸ್ವತೀ

1992

ಪ್ರಕಾಶಕರು

ಆರ್ಯ ಸಮಾಜ

ಸ್ವಾಮೀ ಶ್ರದ್ಧಾನಂದ ಭವನ

ವಿಶ್ವೇಶ್ವರಪುರಂ, ಬೆಂಗಳೂರು–560 004

(ದೂರವಾಣಿ : 626380)

2000 ಪ್ರತಿಗಳು

ಬೆಲೆ : 4 = 00 ರೂಪಾಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ARYODDESYA RATNAMALA (Kannada)

A Garland of One Hundred
Gems Defining the Chief
Principles of Vedic Dharma

Written in 1877 in Hindi by: **Swamy Dayananda Saraswati**

Translated by : **Upendra Bhoopala**

First Edition : **1992**

Copies : **2000**

Pages : **27 + XI**

Price : **Rs. 4 = 00**

Published by : **ARYA SAMAJ**
Swamy Shraddhananda Bhavan
Visveswarapuram,
Bangalore-560 004
Phone : 626380

Printed by : **PARIMALA MUDRANALAYA**
Hanumanthanagar, Sri Ramanjaneya Road
Bangalore-560 019
Phone: 625516

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ಮಾತು

ಆರ್ಯ ಸಮಾಜ, ಸ್ವಾಮೀ ಶ್ರದ್ಧಾನಂದ ಭವನ, ವಿಶ್ವೇಶ್ವರಪುರಂ, ಬೆಂಗಳೂರು ಪ್ರಚಾರಕಾರ್ಯ ಪದ್ಧತಿಯಲ್ಲಿ ತನ್ನದೇ ಆದ ವಿಶಿಷ್ಟಶೈಲಿಯನ್ನು ಅನುಸರಿಸುತ್ತಿರುವುದು ತಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. DONATION

ವೈದಿಕವಾಙ್ಮಯವನ್ನು ಕನ್ನಡಿಗರ ಕೈಗೆ ಎಟುಕುವಂತೆ ಮಾಡುವುದು ನಮ್ಮ ಮುಖ್ಯ ಉದ್ದೇಶ್ಯವಾದುದರಿಂದ, **'ವೇದ ಸಂಪದಾ'**, ಎಂಬ ಯೋಜನೆಯಡಿಯಲ್ಲಿ ಬಹಳಷ್ಟು ಗ್ರಂಥಗಳನ್ನು ಯೋಜನಾಬದ್ಧ, ಹಾಗೂ ಸಮಯಬದ್ಧ ಕಾರ್ಯಕ್ರಮದಂತೆ ಪ್ರಕಾಶಿಸಲು ಉದ್ದೇಶಿಸಿ (ಹೊರಟಿ)ದ್ದೇವೆ.

ಮೊದಲು ಮಹರ್ಷಿ ದಯಾನಂದ ಸರಸ್ವತಿಯವರ ಎಲ್ಲ ಗ್ರಂಥಗಳನ್ನೂ ಕನ್ನಡೀಕರಿಸಿ, ಪ್ರಕಾಶಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಅವರ **'ಸಂಸ್ಕಾರ ವಿಧಿ'**, **'ಸತ್ಯಾರ್ಥ ಪ್ರಕಾಶ'**, **'ಕಾಶೀಶಾಸ್ತ್ರಾರ್ಥ'**, ಹಾಗೂ **'ದಯಾನಂದ ಪ್ರವಚನಮಾಲಾ'**, ಎಂಬ 4 ಗ್ರಂಥಗಳು (ಪುಟ 2200) ಕಳೆದ ಮೂರು ವರ್ಷಗಳ ಅಲ್ಪಾವಧಿಯಲ್ಲೇ ಕನ್ನಡಿಗರ ಕೈ ಸೇರಿವೆ.

ಅವರ ಉಳಿದ 43 ಗ್ರಂಥಗಳಲ್ಲಿ — 33 ಲಘು ಗ್ರಂಥಗಳನ್ನು **'ಜನಶ್ರೀ'**, ಎಂಬ ವಿಭಾಗದಡಿಯಲ್ಲಿಯೂ ಮತ್ತು ವೇದಭಾಷ್ಯವೇ ಮೊದಲಾದ 10 ಬೃಹದ್ ಗ್ರಂಥಗಳನ್ನು **'ವೇದಶ್ರೀ'**, ಎಂಬ ವಿಭಾಗದಡಿಯಲ್ಲಿಯೂ ಪ್ರಕಾಶಿಸಲು ಪ್ರಯತ್ನಿಸುತ್ತಿದ್ದೇವೆ.

'ಜನಶ್ರೀ' ವಿಭಾಗದ ಚೊಚ್ಚಲ ಕಾಣಿಕೆಯಾಗಿ **'ಆರ್ಯೋದ್ದೇಶ್ಯರತ್ನಮಾಲಾ'** ಈಗ ನಿಮ್ಮ ಕೈ ಸೇರುತ್ತಿದೆ.

ನಂತರ ವಿದ್ಯಾರ್ಥಿಗಳ, ಹಾಗೂ ತಂದೆ–ತಾಯಿಗಳ ಕರ್ತವ್ಯಪಾಲನೆಯನ್ನು ಮುಖ್ಯವಾಗಿಟ್ಟುಕೊಂಡು, ದೈನಂದಿನ ಜೀವನದಲ್ಲಿ ಪ್ರಾಮಾಣಿಕತೆ, ಹಾಗೂ ಸತ್ಯ ವ್ಯವಹಾರಗಳ ಪ್ರತಿಪಾದನೆಗಾಗಿ ಮಹರ್ಷಿ ದಯಾನಂದರಿಂದ ರಚಿಸಲ್ಪಟ್ಟ ಇನ್ನೊಂದು ಮಹತ್ವಪೂರ್ಣವಾದ ಗ್ರಂಥ, (**'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'** ಎಂಬ, ಉಕ್ತಿಯನ್ನು ಚರಿತಾರ್ಥ ಮಾಡುತ್ತಾ) **'ವ್ಯವಹಾರಭಾನು'** (ಪುಟ 100) ನಿಮ್ಮ ಕೈಸೇರಲಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥವು (ಇಸವೀ) 1955ರಲ್ಲೇ ಡಾll ಡಿ. ವಿಶ್ವಮಿತ್ರರಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟು ಪ್ರಕಾಶಿತವಾಗಿದ್ದರೂ, ಬಹಳ ಕಾಲದ ಹಿಂದೆಯೇ ಅದರ ಪ್ರತಿಗಳು ಮುಗಿದು ಹೋಗಿದ್ದರಿಂದ, ಈಗ ಅದನ್ನು ನವೀನ ಸಂಸ್ಕರಣದ ರೂಪದಲ್ಲಿ ಹೊರತರುತ್ತಿದ್ದೇವೆ. ಇದರ ಅನುವಾದವನ್ನು ಪಂ. ಉಪೇಂದ್ರ ಭೂಪಾಲರು ಹೊಸದಾಗಿ ತಮ್ಮ ವಿಶಿಷ್ಟ ಶೈಲಿಯಲ್ಲಿ ಮಾಡಿದ್ದಾರೆ.

ಮಹರ್ಷಿ ದಯಾನಂದರು ಸಂಸ್ಕೃತವನ್ನು ಕಲಿಯುವವರ ಸಲುವಾಗಿ **ಅಷ್ಟಾಧ್ಯಾಯೀ ವ್ಯಾಕರಣದ** ಆಧಾರದ ಮೇಲೆ **'ವೇದಾಂಗಪ್ರಕಾಶ'**ವನ್ನು ರಚಿಸಿದ್ದರು. ಆದರೆ, ಅದಕ್ಕೂ ಮೊದಲು ಜನರು ವ್ಯವಹಾರದಲ್ಲಿಯೇ ಸಂಸ್ಕೃತ ಸಂಭಾಷಣೆಯನ್ನು ಆರಂಭಿಸಲಿ, ಎಂಬ ಉದ್ದೇಶ್ಯದಿಂದ, **'ಸಂಸ್ಕೃತವಾಕ್ಯಪ್ರಬೋಧ'** ಎಂಬ ಪುಸ್ತಕವನ್ನು ಸಂಸ್ಕೃತದಲ್ಲಿ ರಚಿಸಿದ್ದರು. ಇದರಲ್ಲಿ 800 ವ್ಯವಹಾರ–ಸಿದ್ಧಾಂತಯೋಗ್ಯ ವಾಕ್ಯಗಳಿವೆ. ಈ ಪುಸ್ತಕವು **'ಸಂಸ್ಕೃತವ್ಯವಹಾರಪ್ರಬೋಧ'** (ಪುಟ 170) ಎಂಬ ಹೆಸರಿನಲ್ಲಿ ಕನ್ನಡದ ಅನುವಾದದೊಡನೆ ಶೀಘ್ರವಾಗಿಯೇ ಪ್ರಕಾಶಕ್ಕೆ ಬರಲಿದೆ. ಇದರ ಅನುವಾದವನ್ನೂ ಕೂಡ, ಪಂ. ಉಪೇಂದ್ರ ಭೂಪಾಲರೇ ಮಾಡಿದ್ದಾರೆ.

ಈಗ ಪ್ರಸ್ತುತಪಡಿಸುತ್ತಿರುವ **'ಆರ್ಯೋದ್ದೇಶ್ಯರತ್ನಮಾಲಾ'** ಎಂಬೀ ಕಿರು ಹೊತ್ತಿಗೆಯು ವೈದಿಕಧರ್ಮದ 100 ಪ್ರಮುಖ ಸಿದ್ಧಾಂತಗಳ ಪರಿಭಾಷೆಗಳಿಂದ ಕೂಡಿದೆ. ಮಹರ್ಷಿ ದಯಾನಂದ ಸರಸ್ವತಿಯವರ ಎಲ್ಲ ಕಥನ–ಕಾರ್ಯ–ಕೃತಿಗಳೂ ಇವುಗಳನ್ನೇ ಆಶ್ರಯಿಸಿಕೊಂಡಿವೆ. ಅವರಿಂದ ಹಿಂದೀ ಭಾಷೆಯಲ್ಲಿ ರಚಿತವಾದ ಈ ಕೃತಿಯನ್ನು ವೇದವಿದ್ವಾಂಸರೂ, ಹಾಗೂ ಕರ್ನಾಟಕ ಆರ್ಯಪ್ರತಿನಿಧಿಸಭೆಯ ಆಚಾರ್ಯರೂ ಆದ ಪಂ. ಉಪೇಂದ್ರ ಭೂಪಾಲರು ಮಹರ್ಷಿ ದಯಾನಂದರ ಶೈಲಿಯಲ್ಲೇ ಕನ್ನಡಕ್ಕೆ ಅನುವಾದ ಮಾಡಿ, ತಮ್ಮ ಅನುವಾದ ಸರಣಿಯನ್ನು ನಡೆಸಿಕೊಂಡು ಬಂದಿದ್ದಾರೆ. ಮಹರ್ಷಿ ದಯಾನಂದರ, ವೇದವಿಷಯಕ ಅಮೋಘಕೃತಿ **'ಋಗ್ವೇದಾದಿಭಾಷ್ಯಭೂಮಿಕಾ'** (ಪುಟ1800)ದ **ಮುಕ್ಕಾಲು ಭಾಗ ಕನ್ನಡಾನುವಾದ ಈಗಾಗಲೇ ಮುಗಿದಿದ್ದು, ಇದರ ಪ್ರಥಮ ಭಾಗವು ಪ್ರಕಾಶನವನ್ನು ಕಾಣುವುದರಲ್ಲಿದೆ. ಇದಕ್ಕಾಗಿ ಶ್ರೀಯುತರಿಗೆ ನಮ್ಮ ಅನನ್ಯ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.**

ಈ ಕಿರು ಹೊತ್ತಿಗೆ(ಪುಸ್ತಿಕೆ)ಯು ಹೊರಬರಲು **'ಜನಶ್ರೀ'** ಯೋಜನೆಯ ಅಡಿಯಲ್ಲಿ ದಾನ ನೀಡಿ, ಗ್ರಂಥಪ್ರಕಾಶನಕ್ಕೆ ಕಾರಣಭೂತರಾದ ಎಲ್ಲ ದಾನೀ ಮಹಾಶಯರುಗಳಿಗೂ, ಹಾಗೂ ಅಂದವಾಗಿ ಸಕಾಲದಲ್ಲಿ ಮುದ್ರಿಸಿದ **'ಹರಿಮಳ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುದ್ರಣಾಲಯ', ಹನುಮಂತನಗರ, ಬೆಂಗಳೂರು ಅವರಿಗೂ ನಮ್ಮ ಹಾರ್ದಿಕ ಅಭಿನಂದನೆ, ಮತ್ತು ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಈ ಗ್ರಂಥದ ಕನ್ನಡ ಸಂಸ್ಕರಣದ ಪ್ರಕಾಶನಕ್ಕೆ ಅನುಮತಿ ನೀಡಿದ ರಾಮಲಾಲ್ ಕಪೂರ್ ಟ್ರಸ್ಟ್, ಬಹಾಲ್‌ಗಢ್, ಜಿಲ್ಲೆ ಸೋನೀಪತ್ (ಹರಿಯಾಣ) ಅವರಿಗೆ ನಾವು ಆಭಾರಿಗಳಾಗಿದ್ದೇವೆ.

ವೈದಿಕವಾಙ್ಮಯದ ಅಧ್ಯಯನಕ್ಕೆ ಕೈಪಿಡಿಯಂತಿರುವ ಈ ಕಿರು ಹೊತ್ತಿಗೆಯಲ್ಲಿ ಅಡಕವಾಗಿರುವ 100 ಪರಿಭಾಷೆಗಳ ವಿಶೇಷ ಮನನ, ಕಂಠಸ್ಥೀಕರಣದ ಮೂಲಕ ವೇದಗಳ ಅಧ್ಯಯನಕ್ಕಾಗಿಯೂ, ತದನುಸಾರ ಆಚರಣೆಗಾಗಿಯೂ ಇದು **'ದಾರಿ ದೀಪ'**ದಂತಿದೆ, ಎಂದು ಹೇಳುವುದರಲ್ಲಿ, ಅತಿಶಯೋಕ್ತಿ ಏನಿಲ್ಲ! ಅಲ್ಲದೇ ವಿದ್ವಾಂಸರಲ್ಲೂ, ಸಾಧಾರಣ ಜನರಲ್ಲೂ ಸಂಪ್ರತಿ ಪ್ರಚಲಿತವಾಗಿರುವ ಭ್ರಾಂತಿಗಳೇ ವೇದಾಧ್ಯಯನಕ್ಕೆ ತೊಡಕಾಗಿವೆ. ಇದರಿಂದ ವೈದಿಕಸಿದ್ಧಾಂತಗಳ ಭ್ರಾಂತಿರಹಿತ ಸ್ಪಷ್ಟ ತಿಳುವಳಿಕೆ ಆಗುವುದರಲ್ಲಿ ಸಂಶಯವೂ ಇಲ್ಲ.

ಬಿ.ವಿ ಯತಿರಾಜ್	**ಎ. ನಂಜುಂಡಪ್ಪ**	**ರಮಾನಂದ ಆರ್ಯ**
ಕೋಶಾಧ್ಯಕ್ಷ	ಕಾರ್ಯದರ್ಶಿ	ಅಧ್ಯಕ್ಷ

ಆರ್ಯಸಮಾಜ,
ಸ್ವಾಮೀ ಶ್ರದ್ಧಾನಂದ ಭವನ,
ವಿಶ್ವೇಶ್ವರಪುರಂ, ಬೆಂಗಳೂರು,

ದಿನಾಂಕ: 25-5-1992

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುವಾದಕನ ಮಾತು

ಹತ್ತೊಂಬತ್ತನೆಯ ಶತಮಾನದಲ್ಲಿ ಧಾರ್ಮಿಕ ಜಗತ್ತಿನಲ್ಲಿ ಕ್ರಾಂತಿಯನ್ನುಂಟು ಮಾಡಿದ ಅಪ್ರತಿಮ ವೇದವಿದ್ವಾನ್ **ಸ್ವಾಮಿ ದಯಾನಂದ ಸರಸ್ವತಿಯವರು** ವೇದ ಪ್ರಚಾರಕ್ಕಾಗಿ ಹೋದೆಡೆಯಲ್ಲೆಲ್ಲಾ ಅವರ ಪ್ರವಚನ–ಶಾಸ್ತ್ರಾರ್ಥಗಳಿಂದ ಪ್ರಭಾವಿತರಾದ ಜನರು ಸತ್ಯಧರ್ಮದ ಸಿದ್ಧಾಂತಗಳ ಪರಿಭಾಷೆಗಳಿಂದ ಕೂಡಿದ ಸೂಚಿಯನ್ನು ಅವರಿಂದ ಕೇಳುತ್ತಿದ್ದುದು ಸ್ವಾಭಾವಿಕವೇ ಆಗಿತ್ತು. ಒಂದು ಸರಳವಾದ, ಹಾಗೂ ಸ್ಪಷ್ಟಸೂತ್ರಗಳಿಂದ ಕೂಡಿದ ಪುಸ್ತಕದ ಅಭಾವದಿಂದ, ಜನರನ್ನು ಸಮಾಧಾನ ಪಡಿಸುವುದರಲ್ಲಿ ಸಮಯ ನಷ್ಟವಾಗುತ್ತಿತ್ತು.

ಆದುದರಿಂದ, ಸ್ವಾಮೀಜೀಯವರು ತಮ್ಮ ಅಮೃತಸರ ಪ್ರವಾಸದ ಸಮಯದಲ್ಲಿ* **'ಆರ್ಯೋದ್ದೇಶ್ಯರತ್ನಮಾಲಾ'** ಪುಸ್ತಕವನ್ನು ಬರೆದು ಜನರ ಬೇಡಿಕೆಯನ್ನು ಪೂರ್ತಿ ಮಾಡಿದರು.

ಈ ಪುಸ್ತಕದಲ್ಲಿ 100 ಪರಿಭಾಷೆಗಳಿವೆ.

'ಸತ್ಯಾರ್ಥ ಪ್ರಕಾಶ'ದ, ಉತ್ತರಾರ್ಧದ ಅಂತ್ಯದಲ್ಲಿ **'ಸ್ವಮಂತವ್ಯಾಮಂತವ್ಯ–ಪ್ರಕಾಶ'**ದಲ್ಲಿ 51 ಪರಿಭಾಷೆಗಳಿವೆ.

ಇಸವಿ 1974ರಲ್ಲಿ ರಚಿತವಾದ **'ಸತ್ಯಾರ್ಥಪ್ರಕಾಶ'**ದಲ್ಲಿ **'ಸ್ವಮಂತವ್ಯಾಮಂತವ್ಯಪ್ರಕಾಶ'** ಇರಲಿಲ್ಲ. ಸಂಶೋಧಿತ **'ಸತ್ಯಾರ್ಥಪ್ರಕಾಶ'**ದಲ್ಲಿ (ಇಸವಿ 1883) ಈ ಪ್ರಕರಣ ಇದೆ. ಆದುದರಿಂದ, **'ಆರ್ಯೋದ್ದೇಶ್ಯರತ್ನಮಾಲಾ'** ಪುಸ್ತಕವು ಮೊದಲು ರಚಿತವಾಗಿ, ಅದು **'ಸ್ವಮಂತವ್ಯಾಮಂತವ್ಯಪ್ರಕಾಶ'**ದ 51 ಪರಿಭಾಷೆಗಳಿಗೆ ಮೂಲವಾಯಿತು.

'ಆರ್ಯೋದ್ದೇಶ್ಯರತ್ನಮಾಲಾ'ದ 100 ಪರಿಭಾಷೆಗಳಲ್ಲಿ 41 ಪರಿಭಾಷೆಗಳ ಉಲ್ಲೇಖ **'ಸ್ವಮಂತವ್ಯಾಮಂತವ್ಯಪ್ರಕಾಶ'**ದಲ್ಲೂ ಇದೆ. ಇದನ್ನು + ಈ ಚಿಹ್ನೆಯಿಂದ ನಾವು ಈ ಪುಸ್ತಕದಲ್ಲಿ ತೋರಿಸಿದ್ದೇವೆ.

'ಸ್ವಮಂತವ್ಯಾಮಂತವ್ಯಪ್ರಕಾಶ'ದಲ್ಲಿನ 51 ಪರಿಭಾಷೆಗಳ ಸೂಚಿಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

ಇದರಲ್ಲಿ **'ಆರ್ಯೋದ್ದೇಶ್ಯರತ್ನಮಾಲಾ'**ದ 33 ಪರಿಭಾಷೆಗಳು ಉಲ್ಲಿಖಿತವಾಗಿವೆ. ಇವನ್ನು √ ಈ ಚಿಹ್ನೆಯಿಂದ ಈ ಸೂಚಿಯಲ್ಲಿ ಗುರುತಿಸಲಾಗಿದೆ.

---

* **ಎಂದರೆ, ಆಗಸ್ಟ್ 1877ನೆಯ ಇಸವಿಯಲ್ಲಿ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'**ಆರ್ಯೋದ್ದೇಶ್ಯರತ್ನಮಾಲಾ**'ದ 100 ರತ್ನಗಳ ಭಾಷ್ಯರೂಪದಲ್ಲಿ '**ವೈದಿಕ ಸಿದ್ಧಾಂತ ರತ್ನಾವಲೀ**', ಎಂಬ ಗ್ರಂಥವು ಶ್ರೀ ಸತ್ಯಪಾಲ ಶರ್ಮಾ ಅವರಿಂದ ಹಿಂದೀ ಭಾಷೆಯಲ್ಲಿ ರಚಿಸಲ್ಪಟ್ಟು, ಅದರ ಕನ್ನಡಾನುವಾದವನ್ನು **ಮೈಸೂರು ವಿಶ್ವವಿದ್ಯಾನಿಲಯದ** ಹಿಂದೀ ವಿಭಾಗದವರು ಮಾಡಿ ಪ್ರಕಟಿಸಿದ್ದರು. ಈಗ ಈ ಗ್ರಂಥವೂ ಮುಗಿದಿದೆ. ಇದರಿಂದ, ಈ ಲಘು ಪುಸ್ತಿಕೆಯ ಮಹತ್ವ ಎಷ್ಟೆಂದು ಹೇಳಬೇಕಾಗಿಲ್ಲ!

ಈ ಸಿದ್ಧಾಂತಗಳ ಆಧಾರದ ಮೇಲೆಯೇ ಮಹರ್ಷಿ ದಯಾನಂದರು ತಮ್ಮ ಅನೇಕ ಗ್ರಂಥಗಳನ್ನು ರಚಿಸಿದರು. ಉದಾಹರಣೆಗಾಗಿ—**ಸತ್ಯಾರ್ಥಪ್ರಕಾಶ, ಋಗ್ವೇದಾದಿಭಾಷ್ಯಭೂಮಿಕಾ, ವ್ಯವಹಾರಭಾನು, ಸಂಸ್ಕಾರವಿಧಿ, ವೇದವಿರುದ್ಧಮತಖಂಡನಮ್, ಪಂಚಮಹಾಯಜ್ಞವಿಧಿ,** ಮುಂತಾದುವು. ಆದುದರಿಂದ, ಈ ಗ್ರಂಥಗಳಲ್ಲೂ, ಇವುಗಳ ಉಲ್ಲೇಖ ಯತ್ರ – ತತ್ರ ಆಗಿದೆ.

ಈ ಬಗ್ಗೆ ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಮಹರ್ಷಿ ದಯಾನಂದರು ಋಷಿಕೃತ ಗ್ರಂಥಗಳ ಪಕ್ಷಪಾತಿಗಳಾಗಿದ್ದರು. ಆದುದರಿಂದ, ಅವರು ಋಷಿವಚನಗಳನ್ನು ತಮ್ಮ ಎಲ್ಲಾ ಗ್ರಂಥಗಳಲ್ಲೂ ಉದ್ಧರಿಸಿದ್ದಾರೆ. ಆದರೆ, ವೇದಗಳ ಎದುರಿಗೆ ಅವು ಪರತಃ ಪ್ರಮಾಣಗಳು ಮಾತ್ರ, ಎಂದು ಸಾರಿ ಹೇಳುತ್ತಾರೆ. ಏಕೆಂದರೆ, ವೈದಿಕ ಸಿದ್ಧಾಂತಗಳು ಸಾರ್ವದೇಶಿಕ, ಹಾಗೂ ಸಾರ್ವಕಾಲಿಕವಾಗಿರುತ್ತವೆ. ಆದರೆ, ಋಷಿವಚನಗಳಲ್ಲಿ ಅನೇಕವು ಹಾಗಿರುವುದಿಲ್ಲ!

ಉದಾಹರಣೆಗೆ, '**ಸಂಸ್ಕಾರವಿಧಿ**'ಯಲ್ಲಿ ಉದ್ಧೃತವಾಗಿರುವ ವಾನಪ್ರಸ್ಥ–ಸಂನ್ಯಾಸವಿಷಯಕ ಋಷಿಸಮ್ಮತ ವಿಧಾನಗಳನ್ನು ನೋಡಿ! ಅವುಗಳೆದುರಿಗೆ ಈ '**ಆರ್ಯೋದ್ದೇಶ್ಯರತ್ನಮಾಲಾ**'ದ ವಾನಪ್ರಸ್ಥ–ಸಂನ್ಯಾಸದ ಪರಿಭಾಷೆಗಳನ್ನು ಹೋಲಿಸಿ! ಇವು ಸಾರ್ವದೇಶಿಕ, ಹಾಗೂ ಸಾರ್ವಕಾಲಿಕಗಳಾಗಿವೆ. ಈ ವ್ಯತ್ಯಾಸವನ್ನು ಗಮನಿಸಿಯೇ ಮಹರ್ಷಿ ದಯಾನಂದರ ವೇದಸಮ್ಮತ ಸಿದ್ಧಾಂತಗಳ ಪ್ರಚಾರ ಮಾಡಬೇಕು.

ಮಹರ್ಷಿ ದಯಾನಂದರು ಹಿಂದಿಯಲ್ಲಿ ಬರೆದ ಈ ಪುಸ್ತಿಕೆಯ ಕನ್ನಡಾನುವಾದಕ್ಕಾಗಿ **ರಾಮಲಾಲ್ ಕಪೂರ್ ಟ್ರಸ್ಟ್**, ಬಹಾಲಗಢ್ 131021, ಜಿಲ್ಲೆ ಸೋನೀಪತ್(ಹರಿಯಾಣಾ) ಅವರ ಆಗಸ್ಟ್ 1986ರ ಸಂಸ್ಕರಣವನ್ನು ಆಧಾರವನ್ನಾಗಿಟ್ಟುಕೊಳ್ಳಲಾಗಿದೆ. ಆ ಟ್ರಸ್ಟಿನ ಅಧ್ಯಕ್ಷರಾದ ಮಹೋಮಹೋಪಾಧ್ಯಾಯ ಪಂ. ಯುಧಿಷ್ಠಿರ ಮೀಮಾಂಸಕರು ಇದಕ್ಕಾಗಿ ಕೃಪೆಯಿಟ್ಟು ಅನುಮತಿಯನ್ನು ನೀಡಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದಲ್ಲದೇ, ನಾವು ಮಹರ್ಷಿ ದಯಾನಂದರ ಶೈಲಿಯಲ್ಲಿಯೇ ಈ ಅನುವಾದವನ್ನು ಮಾಡಿದ್ದೇವೆ, ಎಂದು ಬೇರೆ ಹೇಳಬೇಕಾಗಿಲ್ಲವಲ್ಲ !

ಉಪೇಂದ್ರ ಭೂಪಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕಾರಾದಿಕ್ರಮದಿಂದ ರತ್ನಸೂಚೀ

ಅತಿಥಿ	63*
ಅಧರ್ಮ	3
ಅನಾದಿಯ ಸ್ವರೂಪ	54
ಅನಾದಿ ಪದಾರ್ಥಗಳು	52
ಅನುಮಾನ	87
ಅಪರಲೋಕ	11
ಅಪೂಜಾ	36
ಅಭಾವ	93
ಅಭಾವನೆ	70
ಅರ್ಥಾಪತ್ತಿ	91
ಅವಿದ್ಯೆ	17
ಅವಿಶ್ವಾಸ	9
ಆಚಾರ್ಯ	61
ಆಪ್ತ	81
ಆರ್ಯ	40
ಆರ್ಯಾವರ್ತದೇಶ	41
ಆಶ್ರಮ	45
ಆಶ್ರಮದ ಭೇದಗಳು	46
ಈಶ್ವರ	1
ಉಪಮಾನ	88
ಉಪವೇದ	97.
ಉಪಾಂಗ	99
ಉಪಾದಾನ ಕಾರಣ	33

* ರತ್ನ ಸಂಖ್ಯೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪಾಸನೆ	26
ಎಂಟು ಪ್ರಮಾಣಗಳು	83
ಐತಿಹ್ಯ	90
ಕರ್ಮ	38
ಕರ್ತಾ	31
ಕಳ್ಳತನತ್ಯಾಗ	75
ಕಾರಣ	32
ಕಾರ್ಯ	36
ಕ್ರಿಯಮಾಣ	49
ಗುರು	62
ಚೇತನ	68
ಜಡ	67
ಜನ್ಮ	12
ಜಾತಿ	38
ಜೀವದ ಸ್ವರೂಪ	77
ಜ್ಯೇಷ್ಠ-ಕನಿಷ್ಠವ್ಯವಹಾರ	73
ತೀರ್ಥ	20
ದಸ್ಯು	42
ಧರ್ಮ	2
ನಮಸ್ತೇ	100
ನರಕ	15
ನಿಂದೆ	23
ನಿಮಿತ್ತಕಾರಣ	34
ನಿರ್ಗುಣೋಪಾಸನೆ	27
ಪಂಚಾಯತನ ಪೂಜೆ	64
ಪಂಡಿತ	71

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಲೋಕ	10
ಪರೀಕ್ಷೆ	82
ಪರೋಪಕಾರ	57
ಪಾಪ	5
ಪುಣ್ಯ	4
ಪುರಾಣ	96
ಪುರುಷಾರ್ಥ	55
ಪುರುಷಾರ್ಥದ ಭೇದಗಳು	56
ಪೂಜೆ	56
ಪ್ರತ್ಯಕ್ಷ	86
ಪ್ರಮೇಯ	85
ಪ್ರಳಯ	79
ಪ್ರವಾಹದಿಂದ ಅನಾದಿ ಪದಾರ್ಥಗಳು	53
ಪ್ರಾರಬ್ಧ	51
ಪ್ರಾರ್ಥನೆ	24
ಪ್ರಾರ್ಥನೆಯ ಫಲ	25
ಭಾವನೆ	69
ಮನುಷ್ಯ	39
ಮರಣ	13
ಮಾಯಾವಿ	80
ಮಿಥ್ಯಾಭಾಷಣ	7
ಮುಕ್ತಿ	29
ಮುಕ್ತಿಯ ಸಾಧನಗಳು	30
ಮೂರ್ಖ	72
ಯಜ್ಞ	47
ಲಕ್ಷಣ	84

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣ	43
ವರ್ಣಗಳ ಭೇದ	44
ವಿದ್ಯೆ	16
ವಿದ್ಯೆಯ ಪುಸ್ತಕ	60
ವಿಶ್ವಾಸ	8
ವೇದಗಳು	95
ವೇದಾಂಗ	98
ವ್ಯಭಿಚಾರತ್ಯಾಗ	76
ಸಗುಣೋಪಾಸನೆ	28
ಸಂಚಿತ	50
ಸತ್ಪುರುಷ	18
ಸತ್ಯಭಾಷಣ	6
ಸತ್ಸಂಗ-ಕುಸಂಗ	19
ಸದಾಚಾರ	59
ಸಂಭವ	96
ಸರ್ವಹಿತ	74
ಸಾಧಾರಣ ಕಾರಣ	52
ಸೃಷ್ಟಿ	27
ಸ್ತುತಿ	21
ಸ್ತುತಿಯ ಫಲ	22
ಸ್ವಭಾವ	78
ಸ್ವರ್ಗ	14
ಶಬ್ದ	89
ಶಾಸ್ತ್ರ	94
ಶಿಷ್ಟಾಚಾರ	85

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯೋದ್ದೇಶ್ಯರತ್ನಮಾಲಾ

(1) ಈಶ್ವರ +

ಯಾವನ ಗುಣ-ಕರ್ಮ-ಸ್ವಭಾವ ಮತ್ತು ಸ್ವರೂಪವು ಸತ್ಯವೇ ಆಗಿಹೆಯೋ,

ಯಾವನು ಕೇವಲ ಚೇತನಮಾತ್ರ ವಸ್ತುವಾಗಿದ್ದಾನೋ,

ಹಾಗೂ ಯಾವನು ವಿಕಮಾತ್ರ ಅದ್ವಿತೀಯನೂ, ಸರ್ವಶಕ್ತಿಮಂತನೂ, ನಿರಾಕಾರನೂ, ಸರ್ವತ್ರವ್ಯಾಪಕನೂ, ಅನಾದಿಯೂ, ಮತ್ತು ಅನಂತ ಮೊದಲಾದ ಸತ್ಯಗುಣಗಳನ್ನುಳ್ಳವನೂ ಆಗಿದ್ದಾನೋ,

ಮತ್ತು ಯಾವನ ಸ್ವಭಾವವು ಅವಿನಾಶಿ, ಜ್ಞಾನೀ, ಆನಂದೀ, ಶುದ್ಧ, ನ್ಯಾಯಕಾರಿ, ದಯಾಳು ಮತ್ತು ಅಜನ್ಮಾ ಮೊದಲಾದುದು ಆಗಿದೆಯೋ,

ಯಾವನ ಕರ್ಮವು ಜಗತ್ತಿನ ಉತ್ಪತ್ತಿ, ಪಾಲನೆ ಮತ್ತು ವಿನಾಶ ಮಾಡುವುದು, ಹಾಗೂ ಸರ್ವಜೀವರಿಗೂ ಪಾಪ-ಪುಣ್ಯಗಳ ಫಲಗಳನ್ನು ಸರಿ-ಸರಿಯಾಗಿ ತಲುಪಿಸುವುದು ಆಗಿದೆಯೋ,

ಆವನನ್ನು '**ಈಶ್ವರ**', ಎನ್ನುತ್ತಾರೆ.

(2) ಧರ್ಮ +

ಯಾವುದರ ಸ್ವರೂಪವು ಈಶ್ವರನ ಆಜ್ಞೆಯ ಯಥಾವತ್ ಪಾಲನೆ ಮಾಡುವುದಾಗಿದೆಯೋ,

ಮತ್ತು ಪಕ್ಷಪಾತರಹಿತವಾದ ನ್ಯಾಯವನ್ನು ಸರ್ವಹಿತಕ್ಕಾಗಿ ಮಾಡುವುದಾಗಿದೆಯೋ,

---

+ ಈ ಚಿಹ್ನಿತ ರತ್ನಗಳ ಉಲ್ಲೇಖ 'ಸತ್ಯಾರ್ಥಪ್ರಕಾಶ'ದ 'ಸ್ವಮಂತವ್ಯಾಮಂತವ್ಯ-ಪ್ರಕಾಶ'ದಲ್ಲೂ ಮಾಡಲಾಗಿದೆ. ಪರಿಶಿಷ್ಟವನ್ನು ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವುದು ಪ್ರತ್ಯಕ್ಷಾದಿ ಪ್ರಮಾಣಗಳಿಂದ **ಸುಪರೀಕ್ಷಿತವಾಗಿದೆಯೋ,***

ಮತ್ತು ವೇದೋಕ್ತವಾದುದರಿಂದ ಮನುಷ್ಯರೆಲ್ಲರಿಗೂ ಇದೇ ಏಕಮಾತ್ರ ಅಂಗೀಕರಿಸಲು ಯೋಗ್ಯವಾಗಿದೆಯೋ,

ಅದನ್ನು '**ಧರ್ಮ**', ಎನ್ನುತ್ತಾರೆ.

(3) ಅಧರ್ಮ+

ಯಾವುದರ ಸ್ವರೂಪವು ಈಶ್ವರನ ಆಜ್ಞೆಯನ್ನು ತ್ಯಜಿಸಿ,

ಮತ್ತು **ಪಕ್ಷಪಾತಸಹಿತ ಅನ್ಯಾಯಿಯಾಗಿ,**

ಪರೀಕ್ಷೆ ಮಾಡದೇ,

ತನ್ನದೇ ಹಿತವನ್ನು ಸಾಧಿಸುವುದು ಆಗಿದೆಯೋ,

ಯಾವುದು ಅವಿದ್ಯೆ, ಹಠ, ಅಭಿಮಾನ, ಕ್ರೂರತ್ವ ಮೊದಲಾದ ದೋಷಗಳಿಂದ ಕೂಡಿರುವುದರ ಕಾರಣದಿಂದ, ವೇದವಿದ್ಯೆಗೆ ವಿರುದ್ಧವಾಗಿದೆಯೋ,

ಮತ್ತು ಮನುಷ್ಯರೆಲ್ಲರಿಂದಲೂ ತ್ಯಜಿಸಲು ಯೋಗ್ಯವಾಗಿದೆಯೋ,

ಅದು '**ಅಧರ್ಮ**', ಎನಿಸುತ್ತದೆ.

(4) ಪುಣ್ಯ

ಯಾವುದರ ಸ್ವರೂಪವು ವಿದ್ಯಾದಿ ಶುಭಗುಣಗಳ ದಾನಮಾಡುವುದೂ,

ಮತ್ತು ಸತ್ಯಭಾಷಣಾದಿ ಸತ್ಯಾಚಾರವನ್ನು ಪಾಲಿಸುವುದೂ ಆಗಿದೆಯೋ,

ಅದನ್ನು '**ಪುಣ್ಯ**', ಎನ್ನುತ್ತಾರೆ.

(5) ಪಾಪ

ಯಾವುದು ಪುಣ್ಯಕ್ಕೆ ವಿರುದ್ಧವಾಗಿದೆಯೋ,

ಮತ್ತು ಮಿಥ್ಯಾಭಾಷಣಾದಿಗಳನ್ನು ಮಾಡುವುದಾಗಿದೆಯೋ,

ಅದನ್ನು '**ಪಾಪ**', ಎಂದು ಹೇಳುತ್ತಾರೆ.

---

* '**ಸತ್ಯಾರ್ಥ ಪ್ರಕಾಶ**', **ತೃತೀಯ ಸಮುಲ್ಲಾದ ಪುಟ** 88–94,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(6) ಸತ್ಯಭಾಷಣ

ಹೇಗೆ ತನ್ನ ಆತ್ಮನಲ್ಲಿದೆಯೋ, ಹಾಗೆ;

ಮತ್ತು ಅಸಂಭವ ಮೊದಲಾದ ದೋಷಗಳಿಂದ ರಹಿತವನ್ನಾಗಿ ಮಾಡಿ, ಯಾವಾಗಲೂ ಹಾಗೆಯೇ ಹೇಳಬೇಕು.

ಅದನ್ನು '**ಸತ್ಯಭಾಷಣ**', ಎನ್ನುತ್ತಾರೆ.

(7) ಮಿಥ್ಯಾಭಾಷಣ

ಯಾವುದು **ಸತ್ಯಭಾಷಣ** ಎಂದರೆ, ಸತ್ಯವನ್ನು ಹೇಳುವುದಕ್ಕೆ ವಿರುದ್ಧವಾಗಿದೆಯೋ,

ಅದನ್ನು '**ಮಿಥ್ಯಾಭಾಷಣ**', ಎನ್ನುತ್ತಾರೆ. 7757

(8) ವಿಶ್ವಾಸ

ಯಾವುದರ ಮೂಲವು ಅರ್ಥವನ್ನು ಮತ್ತು ಫಲವನ್ನು ನಿಶ್ಚಯಮಾಡಿ, ಸತ್ಯವೇ ಆಗಿದೆಯೋ,

ಅದರ ಹೆಸರು '**ವಿಶ್ವಾಸ**', ಎಂದಾಗಿರುತ್ತದೆ.

(9) ಅವಿಶ್ವಾಸ

ಯಾವುದು ವಿಶ್ವಾಸಕ್ಕೆ **ವಿಪರೀತವಾಗಿದೆಯೋ,**

ಯಾವುದರ ಯಥಾರ್ಥ ಅರ್ಥವಿಲ್ಲವೋ,

ಅದು '**ಅವಿಶ್ವಾಸ**', ಎನಿಸುತ್ತದೆ.

(10) ಪರಲೋಕ

ಯಾವುದರಿಂದ ಸತ್ಯವಿದ್ಯೆಯ ಮೂಲಕ ಪರಮೇಶ್ವರನ ಪ್ರಾಪ್ತಿಯಾಗುತ್ತದೋ,

ಮತ್ತು ಆ ಪ್ರಾಪ್ತಿಯಿಂದ ಈ ಜನ್ಮದಲ್ಲಿ ಅಥವಾ ಪುನರ್ಜನ್ಮದಲ್ಲಿ, ಹಾಗೂ ಮೋಕ್ಷದಲ್ಲಿ ಪರಮಸುಖ ಲಭಿಸುತ್ತದೋ, ಅದನ್ನು '**ಪರಲೋಕ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(11) ಅಪರಲೋಕ

ಯಾವುದು **ಪರಲೋಕಕ್ಕೆ** ವಿಪರೀತವಾಗಿದೆಯೋ,

ಯಾವುದರಲ್ಲಿ ದುಃಖವಿಶೇಷವನ್ನು ಭೋಗಿಸಬೇಕಾಗುತ್ತದೋ,

ಅದು '**ಅಪರಲೋಕ**', ಎನಿಸುತ್ತದೆ.

(12) ಜನ್ಮ +

ಯಾವುದರಲ್ಲಿ ಯಾವುದಾದರೂ ಶರೀರದೊಡನೆ ಜೀವವು ಸಂಯುಕ್ತವಾಗಿ, ಕರ್ಮ ಮಾಡಲು ಸಮರ್ಥವಾಗುತ್ತದೋ,

ಅದನ್ನು '**ಜನ್ಮ**', ಎನ್ನುತ್ತಾರೆ.

(13) ಮರಣ +

ಯಾವ ಶರೀರವನ್ನು ಪಡೆದುಕೊಂಡು ಜೀವವು ಕ್ರಿಯೆ ಮಾಡುತ್ತದೋ, ಆ ಶರೀರದ ಮತ್ತು ಜೀವದ ವಿಯೋಗವು ಯಾವ ಸಮಯದಲ್ಲಾದರೂ ಉಂಟಾಗುತ್ತದೋ,

ಅದನ್ನು '**ಮರಣ**', ಎನ್ನುತ್ತಾರೆ.

(14) ಸ್ವರ್ಗ +

ಯಾವ ವಿಶೇಷ ಸುಖ ಮತ್ತು **ಸುಖದ ಸಾಮಗ್ರಿಯು ಜೀವನಿಗೆ** ಪ್ರಾಪ್ತವಾಗುತ್ತದೋ,

ಅದು '**ಸ್ವರ್ಗ**', ಎನಿಸುತ್ತದೆ.

(15) ನರಕ +

ಯಾವ ವಿಶೇಷ ದುಃಖ ಮತ್ತು ದುಃಖದ ಸಾಮಗ್ರಿಯು ಜೀವನಿಗೆ ಪ್ರಾಪ್ತವಾಗುತ್ತದೋ,

ಅದನ್ನು '**ನರಕ**', ಎನ್ನುತ್ತಾರೆ.

(16) ವಿದ್ಯೆ

ಯಾವುದರಿಂದ ಈಶ್ವರನಿಂದ **ಹಿಡಿದು ಪೃಥಿವೀಪರ್ಯಂತ ಪದಾರ್ಥಗಳ** ಸತ್ಯವಿಜ್ಞಾನವುಂಟಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧನದಿಂದ ಯಥಾಯೋಗ್ಯವಾಗಿ **ಉಪಕಾರ ತೆಗೆದುಕೊಳ್ಳುವುದಾಗಿರುತ್ತದೋ,**

ಅದರ ಹೆಸರು '**ವಿದ್ಯೆ**', ಎಂದಾಗಿರುತ್ತದೆ.

(17) ಅವಿದ್ಯೆ

ಯಾವುದು ವಿದ್ಯೆಗೆ ವಿಪರೀತವಾಗಿರುತ್ತದೋ,

ಭ್ರಮೆ, ಅಂಧಕಾರ ಮತ್ತು ಅಜ್ಞಾನರೂಪವಾಗಿರುತ್ತದೋ,

ಅದನ್ನು '**ಅವಿದ್ಯೆ**', ಎನ್ನುತ್ತಾರೆ.

(18) ಸತ್ಪುರುಷರು

ಯಾರು ಸತ್ಯಪ್ರಿಯರೂ, ಧರ್ಮಾತ್ಮರೂ, ವಿದ್ವಾಂಸರೂ, ಎಲ್ಲರ ಹಿತಕಾರಿಗಳೂ ಮತ್ತು ಮಹಾಶಯರೂ ಆಗಿರುತ್ತಾರೋ,

ಅವರು '**ಸತ್ಪುರುಷರು**', ಎನಿಸಲ್ಪಡುತ್ತಾರೆ.

(19) ಸತ್ಸಂಗ-ಕುಸಂಗ

ಯಾವುದನ್ನು ಮಾಡುವುದರಿಂದ ಮಿಥ್ಯೆಯಿಂದ ಬಿಡುಗಡೆ ಹೊಂದಿ, ಸತ್ಯದ್ದೇ ಪ್ರಾಪ್ತಿಯಾಗುತ್ತದೋ,

ಅದನ್ನು '**ಸತ್ಸಂಗ**', ಎಂದೂ;

ಮತ್ತು ಯಾವುದನ್ನು ಮಾಡುವುದರಿಂದ, ಪಾಪಗಳಲ್ಲಿ ಜೀವರು ಸಿಕ್ಕಿಹಾಕಿಕೊಳ್ಳುತ್ತಾರೋ,

ಅದನ್ನು '**ಕುಸಂಗ**', ಎಂದೂ ಹೇಳುತ್ತಾರೆ.

(20) ತೀರ್ಥ[+]

ಎಷ್ಟು ವಿದ್ಯಾಭ್ಯಾಸ,

ಸುವಿಚಾರ,

ಈಶ್ವರೋಪಾಸನೆ,

ಧರ್ಮದ ಆಚರಣೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸತ್ಯದ ಸಂಗ,

ಬ್ರಹ್ಮಚರ್ಯ,

ಜಿತೇಂದ್ರಿಯತ್ವ ಮೊದಲಾದ ಉತ್ತಮ ಕರ್ಮಗಳಿವೆಯೋ,

ಅವೆಲ್ಲವೂ '**ತೀರ್ಥ**', ಎನಿಸುತ್ತವೆ.

(21) ಸ್ತುತಿ +

ಯಾವುದು ಈಶ್ವರನ, ಅಥವಾ ಯಾವುದಾದರೂ ಬೇರೆ ವಸ್ತುವಿನ ಗುಣಜ್ಞಾನ, ಕಥನ, ಶ್ರವಣ ಮತ್ತು ಸತ್ಯಭಾಷಣ ಮಾಡುವುದು ಆಗಿರುತ್ತದೋ,

ಅದು '**ಸ್ತುತಿ**', ಎನಿಸುತ್ತದೆ.

(22) ಸ್ತುತಿಯ ಫಲ+

ಯಾವ ಗುಣಜ್ಞಾನ ಮೊದಲಾದುವನ್ನು ಮಾಡುವುದರಿಂದ ಗುಣವುಳ್ಳ ಪದಾರ್ಥಗಳಲ್ಲಿ ಪ್ರೀತಿ ಉಂಟಾಗುತ್ತದೋ,

ಅದು '**ಸ್ತುತಿಯ ಫಲ**', ಎನಿಸುತ್ತದೆ.

(23) ನಿಂದೆ

ಯಾವುದು ಮಿಥ್ಯಾಜ್ಞಾನ, ಮಿಥ್ಯಾಭಾಷಣ [ಮತ್ತು] ಸುಳ್ಳಿನಲ್ಲಿ ಆಗ್ರಹ ಮೊದಲಾದುವನ್ನು ಇಡುವ ಕ್ರಿಯೆಯಾಗಿರುತ್ತದೋ,

ಯಾವುದರಿಂದ ಗುಣಗಳನ್ನು ಬಿಟ್ಟು, ಅಪಗುಣಗಳನ್ನು ಆರೋಪಿಸುವುದು ಆಗಿರುತ್ತದೋ,

ಅದು '**ನಿಂದೆ**', ಎನಿಸುತ್ತದೆ.

(24) ಪ್ರಾರ್ಥನೆ+

ತನ್ನ ಪೂರ್ಣಪುರುಷಾರ್ಥದ ನಂತರ, ಉತ್ತಮ ಕರ್ಮಗಳ ಸಿದ್ಧಿಗಾಗಿ ಪರಮೇಶ್ವರನ, ಅಥವಾ ಯಾವನಾದರೂ ಸಾಮರ್ಥ್ಯವುಳ್ಳ ಮನುಷ್ಯನ ಸಹಾಯವನ್ನು ತೆಗೆದುಕೊಳ್ಳುವುದಕ್ಕೆ,

'**ಪ್ರಾರ್ಥನೆ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(25) ಪ್ರಾರ್ಥನೆಯ ಫಲ +

ಅಭಿಮಾನದ ನಾಶ,

ಆತ್ಮನಲ್ಲಿ ಆರ್ದ್ರತೆ*,

ಗುಣಗ್ರಹಣದಲ್ಲಿ ಪುರುಷಾರ್ಥ,

ಮತ್ತು ಅತ್ಯಂತ ಪ್ರೀತಿ ಉಂಟಾಗುವುದು,

'**ಪ್ರಾರ್ಥನೆಯ ಫಲ**' ಆಗಿರುತ್ತವೆ.

(26) ಉಪಾಸನೆ+

ಯಾವುದರಿಂದ ಈಶ್ವರನನ್ನೇ ಆನಂದಸ್ವರೂಪದಲ್ಲಿ ತನ್ನ ಆತ್ಮವನ್ನು ಮಗ್ನವಾಗಿಡಲಾಗುತ್ತದೋ,

ಅದನ್ನು '**ಉಪಾಸನೆ**', ಎನ್ನುತ್ತಾರೆ.

(27) ನಿರ್ಗುಣೋಪಾಸನೆ +

ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಸಂಯೋಗ, ವಿಯೋಗ, ಹಗುರ, ಭಾರ, ಅವಿದ್ಯೆ, ಜನ್ಮ, ಮರಣ, ಮತ್ತು ದುಃಖ ಮೊದಲಾದ ಗುಣಗಳಿಂದ ರಹಿತನಾಗಿದ್ದಾನೆಂದು ಪರಮಾತ್ಮನನ್ನು ತಿಳಿದುಕೊಂಡು, ಅವನ ಯಾವ ಉಪಾಸನೆ ಮಾಡಲಾಗುತ್ತದೋ,

ಅದನ್ನು '**ನಿರ್ಗುಣೋಪಾಸನೆ**', ಎನ್ನುತ್ತಾರೆ.

(28) ಸಗುಣೋಪಾಸನೆ +

ಯಾವನನ್ನು ಸರ್ವಜ್ಞ, ಸರ್ವಶಕ್ತಿಮಾನ್, ಶುದ್ಧ, ನಿತ್ಯ, ಆನಂದ, ಸರ್ವವ್ಯಾಪಕ, ಏಕ, ಸನಾತನ, ಸರ್ವಕರ್ತೃ, ಸರ್ವಾಧಾರ, ಸರ್ವಸ್ವಾಮೀ, ಸರ್ವನಿಯಂತಾ, ಸರ್ವಾಂತರ್ಯಾಮಿ, ಮಂಗಳಮಯ, ಸರ್ವಾನಂದಪ್ರದ, ಸರ್ವಪಿತಾ, ಎಲ್ಲ ಜಗತ್ತನ್ನು ರಚಿಸುವವನು, ನ್ಯಾಯಕಾರಿ, ದಯಾಳು ಮೊದಲಾದ ಸತ್ಯಗುಣಗಳಿಂದ ಯುಕ್ತನಾಗಿದ್ದಾನೆಂದು ತಿಳಿದುಕೊಂಡು, ಆ ಈಶ್ವರನ ಉಪಾಸನೆ ಮಾಡಲಾಗುತ್ತದೋ,

ಅದು '**ಸಗುಣೋಪಾಸನೆ**', ಎನಿಸುತ್ತದೆ.

---

* ಎಂದರೆ, ಮೃದುತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(29) ಮುಕ್ತಿ +

ಎಂದರೆ, ಯಾವುದರಿಂದ ಎಲ್ಲಾ ಕೆಟ್ಟ ಕೆಲಸಗಳಿಂದ ಮತ್ತು ಜನ್ಮ-ಮರಣಾದಿ ದುಃಖಿಸಾಗರದಿಂದ ಬಿಡುಗಡೆ ಹೊಂದಿ, ಸುಖಿಸ್ವರೂಪನಾದ ಪರಮೇಶ್ವರನನ್ನು ಪಡೆದುಕೊಂಡು, ಸುಖದಲ್ಲೇ ಇರುವುದು.

ಅದು '**ಮುಕ್ತಿ**', ಎನಿಸುತ್ತದೆ.

(30) ಮುಕ್ತಿಯ ಸಾಧನಗಳು +

ಎಂದರೆ, ಮೊದಲು ಹೇಳಿದಂತೆ ಈಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಯನ್ನು ಮಾಡುವುದು,

ಧರ್ಮದ ಆಚರಣೆ ಮಾಡುವುದು,

ಮತ್ತು ಪುಣ್ಯದ ಕೆಲಸ ಮಾಡುವುದು,

ಸತ್ಸಂಗದಲ್ಲಿ ವಿಶ್ವಾಸ,

ತೀರ್ಥಸೇವನೆ.*

ಸತ್ಪುರುಷರ ಸಂಗ,

ಮತ್ತು ಪರೋಪಕಾರವೇ ಮೊದಲಾದ ಒಳ್ಳೆಯ ಕೆಲಸಗಳನ್ನು ಮಾಡುವುದು,

ಹಾಗೂ, ಎಲ್ಲಾ ದುಷ್ಟ ಕರ್ಮಗಳಿಂದ ಬೇರೆ ಇರುವುದು.

ಇವೆಲ್ಲವೂ '**ಮುಕ್ತಿಯ ಸಾಧನಗಳು**', ಎನಿಸುತ್ತವೆ.

(31) ಕರ್ತಾ

ಯಾವನು ಸ್ವತಂತ್ರತೆಯಿಂದ ಕರ್ಮಗಳನ್ನು ಮಾಡುತ್ತಾನೋ,

ಎಂದರೆ, ಯಾವನ ಸ್ವಾಧೀನದಲ್ಲಿ ಸಾಧನಗಳೆಲ್ಲವೂ ಇರುತ್ತವೋ,

ಅವನು '**ಕರ್ತಾ**', ಎನಿಸುತ್ತಾನೆ.

---

* 20ನೆಯ ರತ್ನವನ್ನು ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(32) ಕಾರಣ

ಯಾವುದನ್ನು ಗ್ರಹಿಸುವವನು ಯಾವುದಾದರೂ ಕಾರ್ಯವನ್ನು ಅಥವಾ ವಸ್ತುವನ್ನು ಮಾಡಬಲ್ಲನೋ:

ಎಂದರೆ, ಯಾವುದಿಲ್ಲದೇ ಯಾವ ವಸ್ತುವೂ ಆಗಲಾರದೋ:

ಅದು 'ಕಾರಣ', ಎನಿಸುತ್ತದೆ.

ಅದು ಮೂರು ರೀತಿಯದಾಗಿರುತ್ತದೆ.

(33) ಉಪಾದಾನ ಕಾರಣ

ಯಾವುದನ್ನು ಗ್ರಹಣ ಮಾಡಿಯೇ ಉತ್ಪನ್ನವಾಗುತ್ತದೋ, ಅಥವಾ ಯಾವುದನ್ನಾದರೂ ನಿರ್ಮಿಸಲಾಗುತ್ತದೋ:

ಉದಾಹರಣೆಗಾಗಿ, **ಮಣ್ಣಿನಿಂದ** ಗಡಿಗೆ ನಿರ್ಮಿತವಾಗುತ್ತದೆ:

ಅದನ್ನು 'ಉಪಾದಾನ ಕಾರಣ', ಎನ್ನುತ್ತಾರೆ.

(34) ನಿಮಿತ್ತ ಕಾರಣ

ಯಾವನು ನಿರ್ಮಿಸುವವನೋ:

ಉದಾಹರಣೆಗಾಗಿ, **ಕುಂಬಾರನು** ಗಡಿಗೆಯನ್ನು ನಿರ್ಮಿಸುತ್ತಾನೆ;

ಈ ರೀತಿಯ ಪದಾರ್ಥಗಳನ್ನು* '**ನಿಮಿತ್ತ ಕಾರಣ**', ಎನ್ನುತ್ತಾರೆ.

(35) ಸಾಧಾರಣ ಕಾರಣ

ಉದಾಹರಣೆಗಾಗಿ, ಚಕ್ರ, ದಂಡ ಮೊದಲಾದುವು, ಮತ್ತು ದಿಕ್ಕು, ಆಕಾಶ, ಹಾಗೂ ಪ್ರಕಾಶ:

ಇವನ್ನು '**ಸಾಧಾರಣ ಕಾರಣ**', ಎನ್ನುತ್ತಾರೆ.

(36) ಕಾರ್ಯ

ಯಾವುದು ಯಾವುದಾದರೂ ಪದಾರ್ಥದ ಸಂಯೋಗವಿಶೇಷದಿಂದ ಸ್ಥೂಲವಾಗಿ, ಕೆಲಸಕ್ಕೆ ಬರುತ್ತದೋ,

---

* ಇಲ್ಲಿ ನಿರ್ಜೀವ ವಸ್ತು, ಎಂದು ಅಭಿಪ್ರಾಯವಲ್ಲ. ನಿಮಿತ್ತ ಎಂದರ್ಥ.
ಇಲ್ಲಿ ಕುಂಬಾರ, ಎಂದರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದರೆ, ಯಾವುದು ಮಾಡುವುದಕ್ಕೆ ಯೋಗ್ಯವೋ,

ಅದು ಆ '**ಕಾರಣ**'ದ '**ಕಾರ್ಯ**', ಎನಿಸುತ್ತದೆ.

(37) ಸೃಷ್ಟಿ+

ಕರ್ತೃವಿನ ರಚನೆಯಿಂದ ಯಾವ ಕಾರಣದ್ರವ್ಯವು ಸಂಯೋಗವಿಶೇಷದಿಂದ ಅನೇಕ ಪ್ರಕಾರಗಳ ಕಾರ್ಯರೂಪವಾಗಿ, ವರ್ತಮಾನದಲ್ಲಿ ವ್ಯವಹಾರ ಮಾಡಲು ಯೋಗ್ಯವಾಗುತ್ತದೋ,

ಅದು '**ಸೃಷ್ಟಿ**', ಎನಿಸುತ್ತದೆ.

(38) ಜಾತಿ

ಯಾವುದು ಜನ್ಮದಿಂದ ಹಿಡಿದು ಮರಣಪರ್ಯಂತ ವಿದ್ಯಮಾನವಾಗಿರುತ್ತದೋ,

ಯಾವುದು ಅನೇಕ ವ್ಯಕ್ತಿಗಳಲ್ಲಿ ಏಕರೂಪತೆಯಿಂದ ಪ್ರಾಪ್ತವಾಗುತ್ತದೋ,

ಯಾವುದು ಈಶ್ವರಕೃತವೋ, ಎಂದರೆ ಮನುಷ್ಯ, ಹಸು, ಕುದುರೆ ಮತ್ತು ವೃಕ್ಷವೇ ಮೊದಲಾದ ಸಮೂಹಗಳೋ,

[ಅವು] '**ಜಾತಿ**', ಎಂಬ ಶಬ್ದದ ಅರ್ಥದಿಂದ ಗ್ರಹಿಸಲ್ಪಡುತ್ತವೆ.

(39) ಮನುಷ್ಯ+

ಎಂದರೆ, ಯಾವನು ವಿಚಾರ ಮಾಡದೇ ಯಾವ ಕೆಲಸವನ್ನೂ ಮಾಡುವುದಿಲ್ಲವೋ,

ಅವನ ಹೆಸರು '**ಮನುಷ್ಯ**', ಎಂದು ಆಗಿರುತ್ತದೆ.

(40) ಆರ್ಯರು+

ಯಾರು ಶ್ರೇಷ್ಠಸ್ವಭಾವ[ಯುಕ್ತ]ರೂ,

ಧರ್ಮಾತ್ಮರೂ,

ಪರೋಪಕಾರಿಗಳೂ,

ಸತ್ಯವಿದ್ಯೆಯ ಗುಣಯುಕ್ತರೂ, ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯಾವರ್ತದೇಶದಲ್ಲಿ ಯಾವಾಗಿನಿಂದಲೂ ಇರುವವರೂ ಆಗಿರುತ್ತಾರೋ,

ಅವರನ್ನು '**ಆರ್ಯರು**', ಎನ್ನುತ್ತಾರೆ.

(41) ಆರ್ಯಾವರ್ತ ದೇಶ+

ಹಿಮಾಲಯಾ, ವಿಂಧ್ಯಾಚಲ*, ಸಿಂಧೂನದಿ ಮತ್ತು ಬ್ರಹ್ಮಪುತ್ರ ನದಿ—ಈ ನಾಲ್ಕಕ್ಕೆ ಮಧ್ಯೆ,

ಮತ್ತು ಎಲ್ಲಿಯವರೆಗೆ ಅವುಗಳ ವಿಸ್ತಾರವಿದೆಯೋ,

ಅವುಗಳ ಮಧ್ಯೆ ಯಾವ ದೇಶವಿದೆಯೋ,

ಅದರ ಹೆಸರು '**ಆರ್ಯಾವರ್ತ**', ಎಂದಿರುತ್ತದೆ.

(42) ದಸ್ಯು+

ಅನಾರ್ಯ,

ಎಂದರೆ, ಮೂರ್ಖ,

ಆರ್ಯರ ಸ್ವಭಾವ ಮತ್ತು ನಿವಾಸದಿಂದ ಬೇರೆ ಇರುವವನು,

ದುಷ್ಟಮನುಷ್ಯನಾದ ದರೋಡೆಕೋರ, ಕಳ್ಳ, ಹಿಂಸಕ,

ಅವನು '**ದಸ್ಯು**', ಎನಿಸುತ್ತಾನೆ.

(43) ವರ್ಣ+

ಯಾವುದು ಗುಣ ಮತ್ತು ಕರ್ಮಗಳ ಯೋಗದಿಂದ ಗ್ರಹಿಸಲಾಗುತ್ತದೋ,

ಅದು '**ವರ್ಣ**', ಎಂಬ ಶಬ್ದದ ಅರ್ಥದಿಂದ ಗ್ರಹಿಸಲಾಗುತ್ತದೆ.

(44) ವರ್ಣದ ಭೇದಗಳು+

ಯಾವುದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಮೊದಲಾದುವೋ,

ಅವು '**ವರ್ಣ[ಭೇದ]**', ಎನಿಸುತ್ತವೆ.

---

* ಇದು ನರ್ಮದಾ ನದಿಯ ಉತ್ತರ ದಿಕ್ಕಿನಲ್ಲಿರುವ ವರ್ತಮಾನದ ವಿಂಧ್ಯಪರ್ವತವಲ್ಲ. ದಕ್ಷಿಣ ಭಾರತದ ಪೂರ್ವ-ಪಶ್ಚಿಮ ಘಟ್ಟಗಳ ನಡುಮಣ ಪ್ರದೇಶ ವಿಂಧ್ಯಾಚಲ ಎನಿಸುತ್ತದೆ. ಸತ್ಯಾರ್ಥಪ್ರಕಾಶ' ಆಷ್ಟಮ ಸಮುಲ್ಲಾಸ, ಪುಟ 430ರ ಪಾದಟಿಪ್ಪಣಿಯನ್ನು ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(45) ಆಶ್ರಮಗಳು+

ಯಾವವುಗಳಲ್ಲಿ ಅತ್ಯಂತ ಪರಿಶ್ರಮ ಮಾಡಿ,

ಉತ್ತಮ ಗುಣಗಳ ಗ್ರಹಣವನ್ನೂ,

ಮತ್ತು ಶ್ರೇಷ್ಠ ಕಾರ್ಯಗಳನ್ನೂ ಮಾಡಲಾಗುತ್ತದೋ,

ಅವನ್ನು '**ಆಶ್ರಮ**', ಎನ್ನುತ್ತಾರೆ.

(46) ಆಶ್ರಮದ ಭೇದಗಳು+

ಯಾವುದು ಸದ್ವಿದ್ಯೆ ಮೊದಲಾದ ಗುಣಗಳ ಗ್ರಹಣ,

ಮತ್ತು ಜಿತೇಂದ್ರಿಯತ್ವದಿಂದ ಆತ್ಮಾ, ಹಾಗೂ ಶರೀರದ ಬಲಗಳನ್ನು ಹೆಚ್ಚಿಸುವುದಕ್ಕಾಗಿ [ಮಾಡಲ್ಪಡುವುದೋ, ಅದು] '**ಬ್ರಹ್ಮಚರ್ಯ**';

ಯಾವುದು ಸಂತಾನೋತ್ಪತ್ತಿ ಮತ್ತು ವಿದ್ಯೆ ಮೊದಲಾದ ಎಲ್ಲಾ ವ್ಯವಹಾರಗಳನ್ನೂ ಸಿದ್ಧಿಸುವುದಕ್ಕಾಗಿ [ಮಾಡಲ್ಪಡುವುದೋ, ಅದು] '**ಗೃಹಸ್ಥಾಶ್ರಮ**';

ಯಾವುದು ವಿಚಾರ [ಮಾಡುವುದಕ್ಕಾಗಿ ಮಾಡಲ್ಪಡುವುದೋ, ಅದು] '**ವಾನಪ್ರಸ್ಥ**'; ಮತ್ತು—

ಯಾವುದು ಎಲ್ಲರಿಗೂ ಉಪಕಾರ ಮಾಡುವುದಕ್ಕಾಗಿ [ಇರುವುದೋ, ಅದು] '**ಸಂನ್ಯಾಸಾಶ್ರಮ**' ಆಗಿರುತ್ತದೆ.

ಇವು '**ನಾಲ್ಕು ಆಶ್ರಮಗಳು**', ಎನಿಸುತ್ತವೆ.

(47) ಯಜ್ಞ+

ಯಾವುದು ಅಗ್ನಿಹೋತ್ರದಿಂದ ಹಿಡಿದು ಅಶ್ವಮೇಧಪರ್ಯಂತ [ಇದೆಯೋ]; ಅಥವಾ—

ಯಾವುದು ಶಿಲ್ಪ [ವಿದ್ಯೆ]ಯೋ,

ವ್ಯವಹಾರವೋ,

ಮತ್ತು ಯಾವುದು ಪದಾರ್ಥವಿಜ್ಞಾನವೋ,

ಯಾವುದು ಜಗತ್ತಿನ ಉಪಕಾರಕ್ಕಾಗಿ ಮಾಡಲಾಗುತ್ತದೋ,

ಅದನ್ನು '**ಯಜ್ಞ**' ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(48) ಕರ್ಮ

ಜೀವವು ಮನಸ್ಸು, ಇಂದ್ರಿಯ ಮತ್ತು ಶರೀರದಲ್ಲಿ ಯಾವ ಚೇಷ್ಟಾವಿಶೇಷವನ್ನು ಮಾಡುತ್ತದೋ,

ಅದು '**ಕರ್ಮ**', ಎನಿಸುತ್ತದೆ.

ಅದು ಶುಭ, ಅಶುಭ ಮತ್ತು ಮಿಶ್ರಭೇದದಿಂದ ಮೂರು ವಿಧದದ್ದಾಗಿರುತ್ತದೆ.

(49) ಕ್ರಿಯಮಾಣ

ಯಾವುದು ವರ್ತಮಾನದಲ್ಲಿ ಮಾಡಲಾಗುತ್ತದೋ,

ಅದು '**ಕ್ರಿಯಮಾಣ**' ಕರ್ಮ, ಎನಿಸುತ್ತದೆ.

(50) ಸಂಚಿತ

ಯಾವ ಕ್ರಿಯಮಾಣ[ಕರ್ಮ]ದ ಸಂಸ್ಕಾರವು ಜ್ಞಾನದಲ್ಲಿ **ಸಂಗೃಹೀತವಾಗುತ್ತದೋ,**

[ಅದನ್ನು] '**ಸಂಚಿತ**' ಸಂಸ್ಕಾರ, ಎನ್ನುತ್ತಾರೆ.

(51) ಪ್ರಾರಬ್ಧ

ಪೂರ್ವದಲ್ಲಿ ಮಾಡಿದ ಕರ್ಮಗಳ ಯಾವ ಸುಖ–ದುಃಖರೂಪವಾದ ಫಲಗಳ ಭೋಗ ಮಾಡಲಾಗುತ್ತದೋ, ಅದನ್ನು '**ಪ್ರಾರಬ್ಧ**', ಎನ್ನುತ್ತಾರೆ.

(52) ಅನಾದಿ ಪದಾರ್ಥಗಳು+

ಯಾವುವು ಈಶ್ವರ, ಜೀವ ಮತ್ತು ಜಗತ್ತಿನ ಕಾರಣವೋ*, [ಅವು]:

ಈ ಮೂರೂ '**ಸ್ವರೂಪದಿಂದ ಅನಾದಿ**' ಆಗಿವೆ.

(53) ಪ್ರವಾಹದಿಂದ ಅನಾದಿ ಪದಾರ್ಥಗಳು+

ಯಾವುದು ಕಾರ್ಯಜಗತ್ತೋ,

ಜೀವದ ಕರ್ಮಗಳೋ,

ಇದನ್ನು '**ಮೂಲ ಪ್ರಕೃತಿ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಇವುಗಳ ಸಂಯೋಗ-ವಿಯೋಗವೋ,

ಈ ಮೂರೂ '**ಪರಂಪರೆಯಿಂದ ಅನಾದಿ**' ಆಗಿವೆ.

(54) ಅನಾದಿಯ ಸ್ವರೂಪ

ಯಾವುದು ಎಂದಿಗೂ ಉತ್ಪನ್ನವಾಗಿಲ್ಲವೋ,

ಯಾವುದರ ಕಾರಣವು ಯಾವುದೂ ಆಗದೋ,

ಯಾವುದು ಯಾವಾಗಿನಿಂದಲೂ ವರ್ತಮಾನವಾಗಿದೆಯೋ,

ಅದು '**ಅನಾದಿ**', ಎನಿಸುತ್ತದೆ.

(55) ಪುರುಷಾರ್ಥ+

ಎಂದರೆ, ಯಾವಾಗಲೂ ಆಲಸ್ಯವನ್ನು ತ್ಯಜಿಸಿ, ಉತ್ತಮ ವ್ಯವಹಾರಗಳ ಸಿದ್ಧಿಗಾಗಿ,

ಮನಸ್ಸು, ಶರೀರ, ವಾಣಿ ಮತ್ತು ಧನದಿಂದ ಯಾವ ಅತ್ಯಂತ ಉದ್ಯೋಗ ಮಾಡುವುದೋ,

ಅದನ್ನು '**ಪುರುಷಾರ್ಥ**', ಎನ್ನುತ್ತಾರೆ.

(56) ಪುರುಷಾರ್ಥದ ಭೇದಗಳು

ಅಪ್ರಾಪ್ತ ವಸ್ತುವಿನ ಇಚ್ಛೆ ಮಾಡುವುದು

ಪ್ರಾಪ್ತ(ವಸ್ತು)ವನ್ನು ಉತ್ತಮ ರೀತಿಯಿಂದ ರಕ್ಷಿಸುವುದು,

ರಕ್ಷಿಸಿದ್ದನ್ನು ಹೆಚ್ಚಿಸುವುದು,

ಮತ್ತು ವರ್ಧಿಸಿದ ಪದಾರ್ಥಗಳನ್ನು ಸತ್ಯವಿದ್ಯೆಯ ಉನ್ನತಿಯಲ್ಲಿ, ಹಾಗೂ ಎಲ್ಲರ ಹಿತಮಾಡುವುದಕ್ಕಾಗಿ ವ್ಯಯ ಮಾಡುವುದು.

ಈ ನಾಲ್ಕು ಪ್ರಕಾರದ ಕರ್ಮಗಳನ್ನು '**ಪುರುಷಾರ್ಥ[ಭೇದ]**', ಎನ್ನುತ್ತಾರೆ.

(57) ಪರೋಪಕಾರ+

ಎಂದರೆ, ತನ್ನ ಎಲ್ಲಾ ಸಾಮರ್ಥ್ಯದಿಂದ ಇತರ ಪ್ರಾಣಿಗಳಿಗೆ ಸುಖವನ್ನುಂಟು ಮಾಡುವುದಕ್ಕಾಗಿ ತನು-ಮನ-ಧನದಿಂದ ಯಾವ ಪ್ರಯತ್ನ ಮಾಡಲಾಗುತ್ತದೋ,

ಅದು '**ಪರೋಪಕಾರ**', ಎನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(58) ಶಿಷ್ಟಾಚಾರ+

ಯಾವುದರಲ್ಲಿ ಶುಭಗುಣಗಳ ಗ್ರಹಣವೂ,

ಮತ್ತು ಅಶುಭಗುಣಗಳ ತ್ಯಾಗವೂ ಮಾಡಲಾಗುತ್ತದೋ,

ಅದು '**ಶಿಷ್ಟಾಚಾರ**', ಎನಿಸುತ್ತದೆ.

(59) ಸದಾಚಾರ

ಸೃಷ್ಟಿಯಿಂದಾರಂಭಿಸಿ, ಇಂದಿನ ತನಕ ಸತ್ಪುರುಷರ ಯಾವ ವೇದೋಕ್ತ ಆಚರಣೆಯು ನಡೆದು ಬಂದಿದೆಯೋ,

ಎಂದರೆ, ಯಾವುದರಲ್ಲಿ ಸತ್ಯದ್ದೇ ಆಚರಣೆ ಮತ್ತು ಅಸತ್ಯದ ಪರಿತ್ಯಾಗ ಮಾಡಲಾಗಿದೆಯೋ,

ಅದನ್ನು '**ಸದಾಚಾರ**', ಎನ್ನುತ್ತಾರೆ.

(60) ವಿದ್ಯೆಯ ಪುಸ್ತಕ

ಯಾವುವು ಈಶ್ವರೋಕ್ತವೂ,

ಸನಾತನವೂ,

ವಿದ್ಯಾಮಯವೂ,

ಆದ ನಾಲ್ಕು ವೇದಗಳಿವೆಯೋ,

ಅವನ್ನು '**ವಿದ್ಯೆಯ ಪುಸ್ತಕ**', ಎನ್ನುತ್ತಾರೆ.

(61) ಆಚಾರ್ಯ+

ಯಾವನು ಶ್ರೇಷ್ಠ ಆಚರಣೆಯನ್ನು ಗ್ರಹಣ ಮಾಡಿಸಿ,

ಎಲ್ಲಾ ವಿದ್ಯೆಗಳನ್ನೂ ಕಲಿಸಿಬಿಡುತ್ತಾನೋ,

ಅವನನ್ನು '**ಆಚಾರ್ಯ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(62) ಗುರು+

ಯಾವನು ವೀರ್ಯದಾನದಿಂದ ಹಿಡಿದು, ಭೋಜನ ಮೊದಲಾದುವನ್ನು ಮಾಡಿಸಿ, ಪಾಲನೆ ಮಾಡುತ್ತಾನೋ,

ಅದರಿಂದ ತಂದೆಯನ್ನು '**ಗುರು**', ಎನ್ನುತ್ತಾರೆ:

ಮತ್ತು ಯಾವನು ತನ್ನ ಸತ್ಯೋಪದೇಶದಿಂದ ಹೃದಯದ ಅಜ್ಞಾನರೂಪ ಅಂಧಕಾರವನ್ನು ಅಳಿಸಿಬಿಡುತ್ತಾನೋ, ಅವನನ್ನು ಕೂಡ, '**ಗುರು**' ಅಥವಾ '**ಆಚಾರ್ಯ**', ಎನ್ನುತ್ತಾರೆ.

(63) ಅತಿಥಿ

ಯಾವನ ಬರುವಿಕೆಯ ಮತ್ತು ಹೋಗುವಿಕೆಯ ಯಾವ ನಿಶ್ಚಿತವಾದ ದಿನವೂ ಇಲ್ಲವೋ,

ಮತ್ತು ಯಾವನು ವಿದ್ವಾಂಸನಾಗಿ ಸರ್ವತ್ರ ಭ್ರಮಣ ಮಾಡುತ್ತಾ, ಪ್ರಶ್ನೋತ್ತರಗಳ [ಮೂಲಕ] ಉಪದೇಶದಿಂದ ಜೀವರೆಲ್ಲರ ಉಪಕಾರ ಮಾಡುತ್ತಾನೋ,

ಅವನನ್ನು '**ಅತಿಥಿ**', ಎನ್ನುತ್ತಾರೆ.

(64) ಪಂಚಾಯತನ ಪೂಜೆ+

ಜೀವಿಸಿರುವ ತಾಯಿ, ತಂದೆ, ಆಚಾರ್ಯ, [ಹಾಗೂ] ಅತಿಥಿಯನ್ನು, ಮತ್ತು ಪರಮೇಶ್ವರನನ್ನು ಯಥಾಯೋಗ್ಯವಾಗಿ ಸತ್ಕರಿಸಿ, ಸಂತುಷ್ಟಪಡಿಸುವುದು.

ಅದನ್ನು '**ಪಂಚಾಯತನ ಪೂಜೆ**', ಎನ್ನುತ್ತಾರೆ.

(65) ಪೂಜೆ

ಜ್ಞಾನವೇ ಮೊದಲಾದ ಗುಣಗಳನ್ನುಳ್ಳವನ ಯಥಾಯೋಗ್ಯವಾದ ಸತ್ಕಾರ ಮಾಡುವುದು ಯಾವುದೋ,

ಅದನ್ನು '**ಪೂಜೆ**', ಎನ್ನುತ್ತಾರೆ.

(66) ಅಪೂಜೆ

ಯಾವುದು ಜ್ಞಾನ ಮೊದಲಾದುವುಗಳಿಲ್ಲದ ಜಡಪದಾರ್ಥವೋ,

ಮತ್ತು ಸತ್ಕಾರಕ್ಕೆ ಯೋಗ್ಯವಲ್ಲವೋ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದರ ಸತ್ಕಾರ ಮಾಡುವುದು ಯಾವುದಿದೆಯೋ,

ಅದು '**ಅಪೂಜೆ**', ಎನಿಸುತ್ತದೆ.

(67) ಜಡ

ಯಾವ ಪದಾರ್ಥವು ಜ್ಞಾನವೇ ಮೊದಲಾದ ಗುಣಗಳಿಂದ ರಹಿತವಾಗಿದೆಯೋ,

ಅದನ್ನು '**ಜಡ**', ಎನ್ನುತ್ತಾರೆ.

(68) ಚೇತನ

ಯಾವ ಪದಾರ್ಥವು ಜ್ಞಾನವೇ ಮೊದಲಾದ ಗುಣಗಳಿಂದ ಯುಕ್ತವಾಗಿದೆಯೋ,

ಅದನ್ನು '**ಚೇತನ**', ಎನ್ನುತ್ತಾರೆ.

(69) ಭಾವನೆ

ಯಾವುದು ಯಾವ ತರಹದ ವಸ್ತುವೋ, ಅದರ ಬಗ್ಗೆ ವಿಚಾರದಿಂದ ಅದೇ ತರಹದ ನಿಶ್ಚಯ ಮಾಡುವುದು;

ಎಂದರೆ, ಯಾವುದರ ವಿಷಯ[ಜ್ಞಾನ]ವು ಭ್ರಮರಹಿತವಾಗಿದೆಯೋ,

ಅಂದರೆ, ಹೇಗಿದೆಯೋ, ಹಾಗೆಯೇ ತಿಳಿದುಕೊಳ್ಳುವುದು.

ಅದನ್ನು '**ಭಾವನೆ**', ಎನ್ನುತ್ತಾರೆ.

(70) ಅಭಾವನೆ

ಯಾವುದು '**ಭಾವನೆ**'ಗೆ ವಿಪರೀತವೋ;

ಎಂದರೆ, ಯಾವುದು ಮಿಥ್ಯಾಜ್ಞಾನದಿಂದ ಒಂದರ ಬಗ್ಗೆ ಇನ್ನೊಂದರ ನಿಶ್ಚಯವನ್ನು ಅಂಗೀಕರಿಸಿಬಿಡುವುದೋ;

ಉದಾಹರಣೆಗಾಗಿ, ಜಡದಲ್ಲಿ ಚೇತನದ, ಹಾಗೂ ಚೇತನದಲ್ಲಿ ಜಡದ, ನಿಶ್ಚಯ ಮಾಡಿಕೊಂಡುಬಿಡುವುದು;

ಅದನ್ನು '**ಅಭಾವನೆ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(71) ಪಂಡಿತ

ಯಾವನು ಸತ್-ಅಸತ್‌ಗಳನ್ನು ವಿವೇಕದಿಂದ ತಿಳಿಯುವವನೋ,

ಧರ್ಮಾತ್ಮನೋ,

ಸತ್ಯವಾದಿಯೋ,

ಸತ್ಯಪ್ರಿಯನೋ,

ವಿದ್ವಾಂಸನೋ,

ಮತ್ತು ಎಲ್ಲರ ಹಿತಕಾರಿಯೋ,

ಅವನನ್ನು '**ಪಂಡಿತ**', ಎನ್ನುತ್ತಾರೆ.

(72) ಮೂರ್ಖ

ಯಾವನು ಅಜ್ಞಾನ, ಹಠ, ದುರಾಗ್ರಹವೇ ಮೊದಲಾದ ದೋಷಗಳಿಂದ ಕೂಡಿರುತ್ತಾನೋ,

ಅವನನ್ನು '**ಮೂರ್ಖ**', ಎನ್ನುತ್ತಾರೆ.

(73) ಜ್ಯೇಷ್ಠ-ಕನಿಷ್ಠವ್ಯವಹಾರ

ಯಾವುದು ದೊಡ್ಡವರಿಂದ ಮತ್ತು ಚಿಕ್ಕವರಿಂದ ಪರಸ್ಪರ ಗೌರವ ಕೊಡುವುದಾಗಿದೆಯೋ,

ಅದನ್ನು '**ಜ್ಯೇಷ್ಠ-ಕನಿಷ್ಠವ್ಯವಹಾರ**', ಎನ್ನುತ್ತಾರೆ.

(74) ಸರ್ವಹಿತ

ಯಾವುದು ತನು-ಮನ-ಧನಗಳಿಂದ ಎಲ್ಲರ ಸುಖವನ್ನು ಹೆಚ್ಚಿಸುವುದಕ್ಕಾಗಿ ಉದ್ಯೋಗ ಮಾಡುವುದಾಗಿರುತ್ತದೋ,

ಅದನ್ನು '**ಸರ್ವಹಿತ**', ಎನ್ನುತ್ತಾರೆ.

(75) ಕಳ್ಳತನತ್ಯಾಗ

ಯಾವುದು ಸ್ವಾಮಿಯ ಅನುಮತಿಯಿಲ್ಲದೇ ಯಾವುದಾದರೂ ವಸ್ತುವನ್ನು ಗ್ರಹಣ ಮಾಡುವುದೋ, ಅದು '**ಕಳ್ಳತನ**';

ಮತ್ತು ಅದನ್ನು ಬಿಟ್ಟು ಬಿಡುವುದು '**ಕಳ್ಳತನತ್ಯಾಗ**', ಎನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(76) ವ್ಯಭಿಚಾರತ್ಯಾಗ

ಯಾವುದು ತನ್ನ ಪತ್ನಿಯನ್ನು ಬಿಟ್ಟು ಬೇರೆಯ ಸ್ತ್ರೀಯೊಡನೆ ಕೂಡುವುದೋ,

ಮತ್ತು ತನ್ನ ಪತ್ನಿಗೂ ಕೂಡ, ಋತುಕಾಲದ ಹೊರತಾಗಿ* ವೀರ್ಯದಾನ ಕೊಡುವುದೋ,

ಹಾಗೆಯೇ ತನ್ನ ಪತ್ನಿಯ ಜೊತೆ ಕೂಡ, ವೀರ್ಯದ ಅತ್ಯಂತ ನಾಶ ಮಾಡುವುದೋ,

ಮತ್ತು ಯೌವನಾವಸ್ಥೆ ಉಂಟಾಗದೇ; ವಿವಾಹ ಮಾಡಿಕೊಳ್ಳುವುದೋ,

ಇವೆಲ್ಲವೂ '**ವ್ಯಭಿಚಾರ**', ಎನಿಸುತ್ತವೆ.

ಅದನ್ನು ಬಿಟ್ಟು ಬಿಡುವುದರ ಹೆಸರು '**ವ್ಯಭಿಚಾರತ್ಯಾಗ**', ಎಂದಿರುತ್ತದೆ.

(77) ಜೀವದ ಸ್ವರೂಪ+

ಯಾವುದು ಚೇತನವೋ,

ಅಲ್ಪಜ್ಞವೋ,

ಇಚ್ಛಾ-ದ್ವೇಷ-ಪ್ರಯತ್ನ-ಸುಖ-ದುಃಖ ಮತ್ತು ಜ್ಞಾನದ ಗುಣವುಳ್ಳದ್ದೋ,

ಹಾಗೂ ನಿತ್ಯವೋ,

ಅದು '**ಜೀವ**'+, ಎನಿಸುತ್ತದೆ.

(78) ಸ್ವಭಾವ

ಯಾವ ವಸ್ತುವಿನ ಯಾವ ಸ್ವಾಭಾವಿಕ ಗುಣ ಇರುತ್ತದೋ;

ಉದಾಹರಣೆಗಾಗಿ, ಅಗ್ನಿಯಲ್ಲಿ **ರೂಪ ಮತ್ತು ದಾಹ**;

ಎಂದರೆ, ಎಲ್ಲಿನ ತನಕ ಆ ವಸ್ತು ಇರುವುದೋ, ಅಲ್ಲಿನ ತನಕ ಆ ವಸ್ತುವಿನ **ಗುಣ ಕೂಡ, ಬಿಟ್ಟು ಹೋಗಲಾರದು.**

ಆದುದರಿಂದ, ಅದನ್ನು '**ಸ್ವಭಾವ**', ಎನ್ನುತ್ತಾರೆ.

---

* ಎಂದರೆ, ಸಂತಾನೋತ್ಪಾದಯ ಉದ್ದೇಶವಿಲ್ಲದೇ,

\+ ಶರೀರಧಾರಣೆ ಮಾಡಿಕೊಂಡ ಮೇಲೆ ಆತ್ಮನಿಗೆ '**ಜೀವ**', ಎಂದು ಹೆಸರಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(79) ಪ್ರಳಯ

ಯಾವುದು ಕಾರ್ಯಜಗತ್ತಿನ ಕಾರಣರೂಪವಾಗುವುದೋ,

ಎಂದರೆ, ಜಗತ್ತನ್ನು ನಿರ್ಮಿಸಿದ ಈಶ್ವರನು ಯಾವ ಯಾವ '**ಕಾರಣ**'ಗಳಿಂದ* ಸೃಷ್ಟಿಯನ್ನು ರಚಿಸುತ್ತಾನೋ,

ಅಂದರೆ, ಅನೇಕ ಕಾರ್ಯಗಳನ್ನು ರಚಿಸಿ,

ಯಥಾವತ್ತಾಗಿ ಪಾಲನೆ ಮಾಡಿ,

ಮತ್ತೆ ಕಾರಣರೂಪವನ್ನಾಗಿ ಮಾಡಿ, ಇಟ್ಟು ಬಿಡುತ್ತಾನೋ,

ಅದರ ಹೆಸರು '**ಪ್ರಳಯ**'. ಎಂದಾಗುತ್ತದೆ.

(80) ಮಾಯಾವಿ

ಯಾವುದು ಛಲ-ಕಪಟ-ಸ್ವಾರ್ಥಗಳಲ್ಲಿ ಪ್ರಸನ್ನವಾಗುವುದೋ,

ದಂಭ**-ಅಹಂಕಾರ, **ಶಠತ್ವ**+ ಮೊದಲಾದ ದೋಷಗಳೋ,

ಅದನ್ನು '**ಮಾಯಾ**'. ಎನ್ನುತ್ತಾರೆ.

ಮತ್ತು ಯಾವ ಮನುಷ್ಯನು ಇದರಿಂದ ಯುಕ್ತನಾಗಿರುತ್ತಾನೋ,

ಅವನು '**ಮಾಯಾವಿ**'. ಎನಿಸುತ್ತಾನೆ.

(81) ಆಪ್ತ+

ಯಾವನು ಛಲವೇ ಮೊದಲಾದ ದೋಷಗಳಿಂದ ರಹಿತನೋ,

ಧರ್ಮಾತ್ಮನೋ,

ವಿದ್ವಾಂಸನೋ,

ಸತ್ಯದ ಉಪದೇಶ ಮಾಡುವವನೋ,

ಎಲ್ಲಾ ರೀತಿಯಿಂದಲೂ ಕೃಪಾದೃಷ್ಟಿಯಿಂದ ವರ್ತಮಾನನಾಗಿ,

---

* ಎಂದರೆ, **ಉಪಾದಾನ ಕಾರಣ, ಸಾಧಾರಣ ಕಾರಣಗಳಿಂದ.**

** **ಗರ್ವ**

\+ **ಮೋಸ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಿದ್ಯಾಂಧಕಾರದ ನಾಶಮಾಡಿ,

ಅಜ್ಞಾನೀ ಜನರ ಆತ್ಮಗಳಲ್ಲಿ ವಿದ್ಯಾರೂಪ್ಪ ಸೂರ್ಯನ ಪ್ರಕಾಶವನ್ನು ಯಾವಾಗಲೂ ಮಾಡುತ್ತಾನೋ,

ಆವನನ್ನು '**ಆಪ್ತ**', ಎನ್ನುತ್ತಾರೆ.

7757

(82) ಪರೀಕ್ಷೆ+

ಯಾವುದು ಪ್ರತ್ಯಕ್ಷವೇ ಮೊದಲಾದ ಎಂಟು ಪ್ರಮಾಣಗಳೊಡನೆ,

ವೇದ ವಿದ್ಯೆಯೊಡನೆ,

ಆತ್ಮನ ಶುದ್ಧಿಯೊಡನೆ,

ಮತ್ತು ಸೃಷ್ಟಿಕ್ರಮಕ್ಕೆ ಅನುಕೂಲವಾಗಿ ವಿಚಾರಿಸಿ, ಸತ್ಯಾಸತ್ಯದ ನಿಶ್ಚಯವನ್ನು ಸರಿ ಸರಿಯಾಗಿ ಮಾಡುವುದು ಆಗಿದೆಯೋ,

ಅದನ್ನು '**ಪರೀಕ್ಷೆ**', ಎನ್ನುತ್ತಾರೆ.

(83) ಎಂಟು ಪ್ರಮಾಣಗಳು+

ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಐತಿಹ್ಯ, ಅರ್ಥಾಪತ್ತಿ, ಸಂಭವ ಮತ್ತು ಅಭಾವ:

ಇವು '**ಎಂಟು ಪ್ರಮಾಣಗಳು**' ಆಗಿವೆ.

ಇವುಗಳಿಂದಲೇ ಎಲ್ಲಾ ಸತ್ಯಾಸತ್ಯಗಳ ಯಥಾಪತ್ತಾದ ನಿಶ್ಚಯವನ್ನು ಮನುಷ್ಯನು ಮಾಡಬಲ್ಲನು.

(84) ಲಕ್ಷಣ

ಯಾವುದರಿಂದ ಅದರ ಸ್ವಾಭಾವಿಕ ಗುಣವಾದ ಲಕ್ಷ್ಯವನ್ನು ತಿಳಿಯಲಾಗುತ್ತದೋ:

ಉದಾಹರಣೆಗಾಗಿ ರೂಪದಿಂದ ಅಗ್ನಿಯನ್ನು ತಿಳಿಯಲಾಗುತ್ತದೆ:

ಅದನ್ನು '**ಲಕ್ಷಣ**', ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(85) ಪ್ರಮೇಯ

ಯಾವುದು ಪ್ರಮಾಣಗಳಿಂದ ತಿಳಿಯಲ್ಪಡುತ್ತದೋ;

ಉದಾಹರಣೆಗೆ, ಕಣ್ಣಿನ ಪ್ರಮೇಯವು ರೂಪವಾಗಿದೆ;

ಅಂದರೆ, ಯಾವುದು ಇಂದ್ರಿಯಗಳಿಂದ ಪ್ರತೀತವಾಗುವುದೋ,

ಅದನ್ನು '**ಪ್ರಮೇಯ**', ಎನ್ನುತ್ತಾರೆ.

(86) ಪ್ರತ್ಯಕ್ಷ

ಯಾವುದು ಪ್ರಕಟವಾಗಿ, ಶಬ್ದವೇ ಮೊದಲಾದ ಪದಾರ್ಥಗಳ ಜೊತೆ ಶ್ರೋತ್ರವೇ ಮೊದಲಾದ ಇಂದ್ರಿಯಗಳ, ಹಾಗೂ ಮನಸ್ಸಿನ ನಿಕಟ ಸಂಬಂಧದಿಂದ ಜ್ಞಾನವಾಗುವುದೋ,

ಅದನ್ನು '**ಪ್ರತ್ಯಕ್ಷ**', ಎನ್ನುತ್ತಾರೆ.

(87) ಅನುಮಾನ

ಯಾವುದಾದರೂ ಮೊದಲು ನೋಡಿದ ಪದಾರ್ಥದ ಒಂದು ಅಂಗವನ್ನು ಪ್ರತ್ಯಕ್ಷವಾಗಿ ನೋಡಿದ ಮೇಲೆ, ನೋಡದ ಅದರ [ಬೇರೆ] ಅಂಗದ ಯಥಾವತ್ ಜ್ಞಾನವು ಯಾವುದರಿಂದ ಆಗುತ್ತದೋ,

ಅದನ್ನು '**ಅನುಮಾನ**', ಎನ್ನುತ್ತಾರೆ.

(88) ಉಪಮಾನ

ಉದಾಹರಣೆಗಾಗಿ— ಯಾವನೋ ಯಾವನಿಗೋ— 'ಹಸುವಿನಂತೆ ನೀಲಜಿಂಕೆ ಇರುತ್ತದೆ', ಎಂದು ಹೇಳಿದನು.

ಇಂತಹ ಉಪಮೆಯಿಂದ ಯಾವ ಸಾದೃಶ್ಯ[+] ಜ್ಞಾನವುಂಟಾಗುತ್ತದೋ,

ಅದನ್ನು '**ಉಪಮಾನ**', ಎನ್ನುತ್ತಾರೆ.

+ **ಸಮಾನವಾಗಿರುವ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(89) ಶಬ್ದ

ಪೂರ್ಣ ಆಪ್ತನಾದ ಪರಮೇಶ್ವರನ ಮತ್ತು ಮೊದಲು ಹೇಳಿದ* **ಆಪ್ತ** ಮನುಷ್ಯನ ಯಾವ ಉಪದೇಶವಿದೆಯೋ,

ಅದನ್ನೇ '**ಶಬ್ದ ಪ್ರಮಾಣ**', ಎನ್ನುತ್ತಾರೆ.

(90) ಐತಿಹ್ಯ

ಯಾವುದು ಶಬ್ದ ಪ್ರಮಾಣಕ್ಕೆ ಅನುಕೂಲವಾಗಿದೆಯೋ,

ಯಾವುದು ಅಸಂಭವವೂ, ಮಿಥ್ಯಾಲೇಖವೂ ಅಲ್ಲವೋ,

ಅದನ್ನೇ '**ಐತಿಹ್ಯ**' (=ಇತಿಹಾಸ), ಎನ್ನುತ್ತಾರೆ.

(91) ಅರ್ಥಾಪತ್ತಿ

ಯಾವ ಒಂದು ಮಾತನ್ನು ಹೇಳುವುದರಿಂದ ಎರಡನೆಯ ಮಾತು, ಹೇಳಲ್ಪಡದೆಯೇ ತಿಳಿಯಲಾಗುತ್ತದೋ,

ಅದನ್ನು '**ಅರ್ಥಾಪತ್ತಿ**', ಎನ್ನುತ್ತಾರೆ.

(92) ಸಂಭವ

ಯಾವ ಮಾತು, ಪ್ರಮಾಣ, ಯುಕ್ತಿ ಮತ್ತು ಸೃಷ್ಟಿಕ್ರಮದಿಂದ ಕೂಡಿರುತ್ತದೋ,

ಅದು '**ಸಂಭವ**', ಎನಿಸುತ್ತದೆ.

(93) ಅಭಾವ

ಉದಾಹರಣೆಗಾಗಿ, ಯಾವನೋ ಯಾವನಿಗೋ,— 'ನೀನು ನೀರನ್ನು ತೆಗೆದುಕೊಂಡು ಬಾ', ಎಂದು ಹೇಳಿದನು.

ಅವನು ಅಲ್ಲಿ ನೋಡಿದಾಗ—'ಅಲ್ಲಿ ನೀರಿಲ್ಲ,', [ಎಂದು ತಿಳಿದನು].

ಆದರೆ, ಎಲ್ಲಿ ನೀರಿರುತ್ತದೋ, ಅಲ್ಲಿಂದ ತೆಗೆದುಕೊಂಡು ಬರಬೇಕು. [ಎಂದು ತಿಳಿದನು].

ಈ ಅಭಾವನಿಮಿತ್ತದಿಂದ ಯಾವ ಜ್ಞಾನ ಉಂಟಾಗುತ್ತದೋ,

ಅದನ್ನು '**ಅಭಾವ**', ಎನ್ನುತ್ತಾರೆ.

---

* ರತ್ನಸಂಖ್ಯೆ 81

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(94) ಶಾಸ್ತ್ರ

ಯಾವುದು ಸತ್ಯವಿದ್ಯೆಗಳ ಪ್ರತಿಪಾದನೆಯಿಂದ ಕೂಡಿರುತ್ತದೋ,

ಮತ್ತು ಯಾವುದರ [ಅಧ್ಯಯನ]ದಿಂದ ಮನುಷ್ಯರಿಗೆ ಸತ್ಯವೇ ಸತ್ಯದ ಶಿಕ್ಷಣವಾಗುತ್ತದೋ,

ಅದಕ್ಕೆ '**ಶಾಸ್ತ್ರ**', ಎನ್ನುತ್ತಾರೆ.

(95) ವೇದಗಳು+

ಯಾವುವು ಈಶ್ವರೋಕ್ತವೂ, ಸತ್ಯವಿದ್ಯೆಗಳಿಂದ ಕೂಡಿದುವೂ ಆದ ಋಕ್ ಸಂಹಿತಾದಿ* ನಾಲ್ಕು ಪುಸ್ತಕಗಳೋ,

ಮತ್ತು ಯಾವವುಗಳಿಂದ ಮನುಷ್ಯರಿಗ ಸತ್ಯಾಸತ್ಯದ ಜ್ಞಾನವುಂಟಾಗುತ್ತದೋ,

ಅವನ್ನು '**ವೇದಗಳು**', ಎನ್ನುತ್ತಾರೆ.

(96) ಪುರಾಣಗಳು**+

ಯಾವುವು ಪ್ರಾಚೀನ ಐತರೇಯ, ಶತಪಥ ಬ್ರಾಹ್ಮಣ ಮೊದಲಾದ ಋಷಿ-ಮುನಿ ರಚಿತಸತ್ಯಾರ್ಥ ಪುಸ್ತಕಗಳೋ,

ಅವುಗಳನ್ನೇ '**ಪುರಾಣ**', **ಇತಿಹಾಸ, ಕಲ್ಪ, ಗಾಥಾ, ಮತ್ತು ನಾರಾಶಂಸೀ**, ಎನ್ನುತ್ತಾರೆ.

(97) ಉಪವೇದ

ಯಾವುದು ವೈದ್ಯಕಶಾಸ್ತ್ರವಾದ '**ಆಯುರ್ವೇದ**'ವೋ,

ಯಾವುದು ಶಸ್ತ್ರಾಸ್ತ್ರವಿದ್ಯೆ, ರಾಜಧರ್ಮ[ಗಳಿಂದ ಕೂಡಿದ] '**ಧನುರ್ವೇದ**'ವೋ,

ಯಾವುದು ಗಾನಶಾಸ್ತ್ರವಾದ '**ಗಂಧರ್ವವೇದ**'ವೋ,

ಮತ್ತು ಶಿಲ್ಪಶಾಸ್ತ್ರವಾದ '**ಅರ್ಥವೇದ**'ವೋ,

ಈ ನಾಲ್ಕನ್ನೂ '**ಉಪವೇದ**', ಎನ್ನುತ್ತಾರೆ.

---

* **ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ**

** **ಬ್ರಹ್ಮವೈವರ್ತ, ಭಾಗವತ ಮೊದಲಾದುವು 'ಪುರಾಣ'ಗಳಲ್ಲ; ಅವು 'ನವೀನವು'. 'ಸತ್ಯಾರ್ಥಪ್ರಕಾಶ' ಏಕಾದಶ ಸಮುಲ್ಲಾಸ, ಪುಟ 694-696 ನೋಡಿ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(98) ವೇದಾಂಗಗಳು

ಯಾವುವು ಆರ್ಷ–ಸನಾತನ ಶಾಸ್ತ್ರಗಳಾದ ಶಿಕ್ಷಾ, ವ್ಯಾಕರಣ ನಿರುಕ್ತ, ಕಲ್ಪ, ಛಂದಸ್ಸು ಮತ್ತು ಜ್ಯೋತಿಷಗಳೋ,

ಅವನ್ನು '**ವೇದಾಂಗಗಳು**', ಎನ್ನುತ್ತಾರೆ.

(99) ಉಪಾಂಗಗಳು

ಯಾವುವು ಋಷಿ-ಮುನಿರಚಿತವಾದ ಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ ಮತ್ತು ವೇದಾಂತ, ಎಂಬ ಆರು ಶಾಸ್ತ್ರಗಳೋ,

ಅವುಗಳನ್ನು '**ಉಪಾಂಗಗಳು**', ಎನ್ನುತ್ತಾರೆ.

(100) ನಮಸ್ತೇ

ನಾನು ನಿಮಗೆ ಗೌರವ ಕೊಡುತ್ತೇನೆ!

---

4 3 2 1

वेदरामाब्ज्चंद्रेऽब्दे विक्रमार्कस्य भूपतेः ।

नभस्ये सितसप्तम्यां सौम्ये पूर्तिमगादियम्॥

ಶ್ರೀಯುತ ಮಹಾರಾಜಾ ವಿಕ್ರಮಾದಿತ್ಯ ಅಪರ 1934ರ ಸಂವತ್ಸರದಲ್ಲಿ ಶ್ರಾವಣ ಮಾಸದ ಶುಕ್ಲಪಕ್ಷ ಸಪ್ತಮಿ ಬುಧವಾರದ ದಿನ+ ಶ್ರೀ ಸ್ವಾಮೀ ದಯಾನಂದ ಸರಸ್ವತಿಯವರು ಆರ್ಯಭಾಷೆಯಲ್ಲಿ* ಎಲ್ಲಾ ಮನುಷ್ಯರ ಹಿತಕ್ಕಾಗಿ ಈ '**ಆರ್ಯೋದ್ದೇಶ್ಯರತ್ನಮಾಲಾ**', ಎಂಬ ಪುಸ್ತಕವನ್ನು ಪ್ರಕಾಶಿಸಿದರು.≈ $

+ 15ನೆಯ ಆಗಸ್ಟ್, 1877

* ಎಂದರೆ, ಹಿಂದೀ ಭಾಷೆಯಲ್ಲಿ

≈ ಎಂದರೆ ರಚಿಸಿದರು, ಎಂದರ್ಥ.

$ ಈ ಪುಸ್ತಕದ ಕನ್ನಡಾನುವಾದವನ್ನು ಪಂ. ಉಪೇಂದ್ರ ಭೂಪಾಲರು ದಿ. 29-4-1992ರಂದು ಮುಗಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಶಿಷ್ಟ

ಸತ್ಯಾರ್ಥಪ್ರಕಾಶ 'ಸ್ವಮಂತವ್ಯಾಮಂತವ್ಯ ಪ್ರಕಾಶ'ದಲ್ಲಿನ ಪದಾರ್ಥಗಳು

(ಪುಟ 1297-1307)

1. ಈಶ್ವರ √
2. ನಾಲ್ಕು ವೇದಗಳು √
3. ಧರ್ಮ-ಅಧರ್ಮ √
4. ಜೀವ √
5. ಜೀವ ಮತ್ತು ಈಶ್ವರ
6. ಅನಾದಿ ಪದಾರ್ಥಗಳು √
7. ಪ್ರವಾಹದಿಂದ ಅನಾದಿ √
8. ಸೃಷ್ಟಿ √
9. ಸೃಷ್ಟಿಯ ಉದ್ದೇಶ್ಯ
10. ಸೃಷ್ಟಿಕರ್ತಾ
11. ಬಂಧ
12. ಮುಕ್ತಿ √
13. ಮುಕ್ತಿಯ ಸಾಧನಗಳು √
14. ಅರ್ಥ
15. ಕಾಮ
16. ವರ್ಣಾಶ್ರಮಗಳು √
17. ರಾಜಾ
18. ಪ್ರಜೆ
19. ನ್ಯಾಯಕಾರಿ
20. ದೇವ
21. ದೇವಪೂಜಾ √
22. ಶಿಕ್ಷಣ
23. ಪುರಾಣ √
24. ತೀರ್ಥ √
25. ಪುರುಷಾರ್ಥ
26. ಮನುಷ್ಯ √
27. ಸಂಸ್ಕಾರ
28. ಯಜ್ಞ √
29. ಆರ್ಯ ಮತ್ತು ದಸ್ಯು √
30. ಆರ್ಯಾವರ್ತ √
31. ಆಚಾರ್ಯ √
32. ಶಿಷ್ಯ
33. ಗುರು √
34. ಪುರೋಹಿತ
35. ಉಪಾಧ್ಯಾಯ
36. ಶಿಷ್ಟಾಚಾರ √
37. ಪ್ರಮಾಣಗಳು √
38. ಆಪ್ತ √
39. ಪರೀಕ್ಷೆ √
40. ಪರೋಪಕಾರ √
41. ಸ್ವತಂತ್ರ-ಪರತಂತ್ರ
42. ಸ್ವರ್ಗ √

7757
पुस्तकालय
पुस्तकालय
कांगड़ी विश्वविद्यालय

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

43. ನರಕ √
44. ಜನ್ಮ √
45. ಜನ್ಮ-ಮೃತ್ಯು √
46. ವಿವಾಹ
47. ನಿಯೋಗ
48. ಸ್ತುತಿ √
49. ಪ್ರಾರ್ಥನೆ √
50. ಉಪಾಸನೆ √
51. ಸಗುಣ- ನಿರ್ಗುಣ-ಸ್ತುತಿ ಪ್ರಾರ್ಥನೋಪಾಸನೆ. √

√ ಈ ಚಿಹ್ನಿತ ಪದಾರ್ಥಗಳು 'ಆರ್ಯೋದ್ದೇಶ್ಯರತ್ನಮಾಲಾ'ದಲ್ಲೂ ಉಲ್ಲಿಖಿತವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Ptd. at PARIMALA MUDRANALAYA, B-19, Ph. : 625516/629322